ಸನ್ಮತಿ ಪ್ರಕಾಶನ
ಪುಷ್ಪ ೪



ಆಚಾರ್ಯಶ್ರೀ ಇಂದ್ರನಂದಿ ವಿರಚಿತ

ನೀತಿಸಾರ-ಸಮುಚ್ಚಯಃ

ಅಪರನಾಮ

ನಿರ್ಗ್ರಂಥ-ಸಮಯಭೂಷಣಂ

ಸಂಪಾದಕ ಮತ್ತು ಅನುವಾದಕ
ಪದ್ಮರಾಜ ನೇಮಿರಾಜ ಶಾಸ್ತ್ರಿ.

ಬೆಲೆ ೧ ರೂ.

ಸನ್ಮತಿ ಪ್ರಕಾಶನ ಪುಷ್ಪ ೪

ಶ್ರೀ ಇಂದ್ರನಂದಿ ಆಚಾರ್ಯ ವಿರಚಿತ

ನೀತಿಸಾರ—ಸಮುಚ್ಚಯ

ಅಪರನಾಮ

ನಿರ್ಗ್ರಂಥ ಸಮಯಭೂಷಣಂ

ಸಂಪಾದಕ ಮತ್ತು ಅನುವಾದಕ
ಪದ್ಮರಾಜ ನೇಮಿರಾಜ ಶಾಸ್ತ್ರಿ.

ವೀರ ಸಂವತ್ ೨೫೦೫


ಪ್ರಕಾಶಕರು-
ಸನ್ಮತಿ ಪ್ರಕಾಶನ, ಬಾಹುಬಲಿ
(ಜಿ. ಕೊಲ್ಹಾಪುರ)

卐

ಮುದ್ರಕರು-
ಬಿ. ಎಸ್. ಪಾಟೀಲ.
ಸನ್ಮತಿ ಮುದ್ರಣಾಲಯ, ಬಾಹುಬಲಿ
(ಕೊಲ್ಹಾಪುರ)

ಸನ್ ೧೯೭೯

ಪುಸ್ತಕ ಪ್ರಕಾಶನಕ್ಕೆ ಪ್ರೇರಣೆ ನೀಡಿದವರು—



ಪ. ಪೂ. ೧೦೮ ಶ್ರೀ ಮಹಾಬಲ ಮುನಿಮಹಾರಾಜರು

ಪುಸ್ತಕ ಪ್ರಕಾಶನಕ್ಕೆ ಸಹಾಯ ನೀಡಿದವರು—



ಧರ್ಮಾನುರಾಗಿ ಶ್ರೀ ಭುಜಬಲಿ ಅಪ್ಪಾರಾವ ಯಲಗುದರಿ

ಮುನ್ನುಡಿ

ಈ ನಿರ್ಗ್ರಂಥಸಮಯಭೂಷಣ ಅಪರನಾಮ ನೀತಿಸಾರ ಸಮುಚ್ಚಯವೆಂಬ ಗ್ರಂಥವನ್ನು ಆಚಾರ್ಯ ಇಂದ್ರನಂದಿ ಮುನಿಗಳು ರಚಿಸಿದ್ದಾರೆ. ಇದು ೧೧೩ ಶ್ಲೋಕಗಳ ಸಣ್ಣ ಹೊತ್ತಿಗೆಯಾದರೂ ಇದರಲ್ಲಿಯ ಪ್ರತಿಯೊಂದು ಶ್ಲೋಕಗಳೂ ಮನನೀಯವಾಗಿವೆ. ಇದರಲ್ಲಿ ಯತಿಗಳ ಸ್ವೈರಾಚಾರಕ್ಕೆ ಸ್ಥಾನವಿಲ್ಲ. ಈ ಪಂಚಮಕಾಲದಲ್ಲಿ ಕಾಲದೋಷದಿಂದ ಜಿನಶಾಸನದಲ್ಲಿ ಸಂಘ ಭೇದಗಳು ಹೇಗೆ ಉಂಟಾದುವು, ನಾವು ಯಾವ ಸಂಘವನ್ನು ಅನುಸರಿಸಬೇಕು ಎಂಬುದನ್ನು ಚನ್ನಾಗಿ ವರ್ಣಿಸಿದ್ದಾರೆ.

ಭ. ಮಹಾವೀರರ ಪರಂಪರಾಗತ ಮೂಲ ಸಂಘದಲ್ಲಿ, ವಿಕ್ರಮಾರ್ಕರಾಜನು ಮತ್ತು ಆಚಾರ್ಯ ಭದ್ರಬಾಹು ಶ್ರುತಕೇವಲಿಗಳು ಸ್ವರ್ಗಹೊಂದಿದ ತರುವಾಯ ಪ್ರಜೆಗಳು ಪಾಪಕರ್ಮದಲ್ಲಿ ಮೋಹಿತರಾಗಿ ಸ್ವಚ್ಛಂದಚಾರಿಗಳಾದರು. ಆಗ ಮುನಿಗಳೂ ಸಹ ಆತ್ಮಜ್ಞಾನ ಮತ್ತು ಬಾಹ್ಯ ತಪಸ್ಸುಗಳನ್ನು ಅತಿಕ್ರಮಣ ಮಾಡಹತ್ತಿದರು. ಆಗ ಮಹರ್ದ್ಧಿಕರಾದ ಆಚಾರ್ಯರು ವರ್ಣ ಜಾತಿಗಳಲ್ಲಿ ಸಂಕರತೆ ಉಂಟಾಗುವುದೆಂಬ ಭೀತಿಯಿಂದ ಎಲ್ಲರ ಉಪಕಾರಕ್ಕೋಸ್ಕರ ಗ್ರಾಮ ಮೊದಲಾದುವುಗಳ ಹೆಸರಿನಿಂದ ಮುನಿಗಳ ಕುಲ ಅಂದರೆ ಗುಂಪುಗಳನ್ನು- ಸಂಘಗಳನ್ನು ನಿರ್ಮಾಣ ಮಾಡಿದರು. ಆ ಸಮಯದಲ್ಲಿ ಅರ್ಹದ್ಬಲಿ ಆಚಾರ್ಯರು ಇದ್ದರು. ಅವರು ಎಲ್ಲ ನೈಮಿತ್ತಿಕರಲ್ಲಿ ಪ್ರಮುಖರಾಗಿದ್ದರು. ಅವರು ಸಂಘಗಳ ಸಂಘಟನವನ್ನು ಮಾಡಿದರು.

ಮೂಲ ಸಂಘದಲ್ಲಿ ಸಿಂಹಸಂಘ, ನಂದಿಸಂಘ, ಸೇನಸಂಘ ಮತ್ತು ದೇವಸಂಘ ಎಂಬ ಭೇದಗಳು ಸ್ಥಾನ, ಪರಿಸ್ಥಿತಿ ಮೊದಲಾದವುಗಳ ವಿಶೇಷತೆಯಿಂದ ಆದುವು. ಈ ಸಂಘಗಳಲ್ಲಿ ಪ್ರತಿಕ್ರಮ, ಪ್ರಾಯಶ್ಚಿತ್ತ ಆಚಾರಾದಿ

ಪ್ರಶಸ್ತ ವಾಚನ ಕ್ರಿಯೆಗಳಲ್ಲಿ ಯಾವುದೇ ತರದ ಭೇದವಿಲ್ಲವಾದುದರಿಂದ ಇವು ಮೂಲ ಸಂಘಗಳೆಂದೇ ಹೇಳಲ್ಪಡುತ್ತವೆ. ಈ ನಾಲ್ಕು ಸಂಘಗಳ ಸಂಹಿತಾಶಾಸ್ತ್ರಾನುಸಾರವಾಗಿ ಪ್ರತಿಷ್ಠಿತವಾದ ಜಿನಬಿಂಬಕ್ಕೇನೇ ನಮಸ್ಕರಿಸಬೇಕು. ಬೇರೆ ಸಂಘಗಳ ಸಂಹಿತಾಶಾಸ್ತ್ರದಿಂದ ಪ್ರತಿಷ್ಠಿತವಾದ ಜಿನಬಿಂಬಗಳಿಗೆ ನಮಸ್ಕರಿಸಬಾರದು. ಏಕೆಂದರೆ ಅಂಥ ಬಿಂಬಗಳಲ್ಲಿ ಮಂತ್ರಾದಿನ್ಯಾಸವು ವಿಪರೀತವಾಗಿರುತ್ತದೆ. ಈ ನಾಲ್ಕು ಸಂಘಗಳ ತರುವಾಯ ಎಷ್ಟೋ ಕಾಲ ಕಳೆದ ಮೇಲೆ ಶ್ವೇತಾಂಬರ, ದ್ರಾವಿಡ, ಯಾಪನೀಯ ಮತ್ತು ಕಾಷ್ಠಾ-ಸಂಘ ಇವುಗಳು ಆ ಕಾಲದಲ್ಲಿ ಮುನಿಗಳ ಮಾನ ಕಷಾಯದ ತೀವ್ರತೆಯಿಂದ ಹುಟ್ಟಿದುವು. ಹೀಗೆ ಕೆಲವು ಮುನಿಗಳು ಶಿಥಿಲಾಚಾರಿಗಳಾಗಿ ತಮಗೆ ಬೇಕಾದಂತೆ ಸಂಘಭೇದಗಳನ್ನು ಮಾಡಿಕೊಂಡರು. ಇವುಗಳು ಜೈನಾಭಾಸಗಳೆಂದು ಹೇಳಲ್ಪಡುತ್ತವೆ. ಈ ಸಂಘಗಳ ಮುನಿಗಳು ಮೂಲ ಸಂಘಗಳಿಂದ ಹೊರತಾಗಿ ತಮ್ಮ ಇಚ್ಛಾನುಸಾರವಾಗಿ ಜೈನ ಮಾರ್ಗದಲ್ಲಿ ವಿಪರೀತತೆಯನ್ನುಂಟು ಮಾಡಿದುದರಿಂದ ಈ ಮುನಿಗಳು ವಂದನೀಯರಲ್ಲವೆಂದು ಹೇಳಿದ್ದಾರೆ.

ದ್ರವ್ಯ ಭಾವ ಲಿಂಗಗಳು

ಸಾಮಾನ್ಯವಾಗಿ ಮುನಿಗಳ ದ್ರವ್ಯಲಿಂಗ ವ್ಯಾಖ್ಯಾನ ಮಾಡುತ್ತ ಹೀಗೆ ಹೇಳಿದ್ದಾರೆ ಅಚೇಲಕ್ಯ-ವಸ್ತ್ರ ಧರಿಸದಿರುವಿಕೆ, ತಲೆಕೂದಲುಗಳನ್ನು ಲೋಚಮಾಡುವುದು, ಅಧಃಕೇಶಧಾರಣೆ, ನಿರಾಭರಣತೆ, ಮಯೂರಪಿಂಛಿಯನ್ನು ಧರಿಸುವುದು, ಅಚ್ಛಿನ್ನದೇಹತೆ ಇವು ಮುನಿಗಳ ಬಾಹ್ಯಲಿಂಗಗಳಾಗಿವೆ. ಈ ದ್ರವ್ಯಲಿಂಗವು ಭಾವಲಿಂಗಕ್ಕೆ ಕಾರಣವಾಗಿದೆ. ಭಾವಲಿಂಗವು ಪರಿಣಾಮರೂಪವಾಗಿರುವುದರಿಂದ ನೇತ್ರ ವಿಷಯವಲ್ಲ. ಆದರೆ ದ್ರವ್ಯಲಿಂಗ ಮಾತ್ರ ನೇತ್ರದ ವಿಷಯವಾಗಿದೆ. ಈ ದ್ರವ್ಯಮುದ್ರೆಯಿಂದಲೇ ಯತಿಯು ಪೂಜ್ಯನಾಗುತ್ತಾನೆ. ಹೀಗೆ ಅನೇಕ ವಿಷಯಗಳನ್ನು ನಿರೂಪಿಸಿದ್ದಾರೆ.

ಗ್ರಂಥಕರ್ತೃಗಳ ಸಮಯ ಹಾಗೂ ರಚಿಸಿದ ಶಾಸ್ತ್ರಗಳು

ಇವರು ಆಚಾರ್ಯ ಅಭಯನಂದಿ ಮುನಿಗಳ ಶಿಷ್ಯರಿದ್ದರು. ಅಭಯ ನಂದಿ ಆಚಾರ್ಯರು ಚಾವುಂಡರಾಯನ ಸಮಕಾಲೀನರಿದ್ದರು ಆದುದರಿಂದ ಇಂದ್ರನಂದಿ ಆಚಾರ್ಯರ ಕಾಲವು ಇಸ್ವಿ ೭ಕೆ ೧೦+೧೧ ಎಂದು ತಿಳಿಯ ಲಾಗುತ್ತದೆ.

ಇವರು ನೀತಿಸಾರಸಮುಚ್ಚಯ, ಇಂದ್ರನಂದಿಸಂಹಿತಾ, ಮುನಿ ಪ್ರಾಯಶ್ಚಿತ್ತ (ಪ್ರಾಕೃತ), ಪ್ರತಿಷ್ಠಾಪಾಠ, ಪೂಜಾಕಲ್ಪ, ಶಾಂತಿಚಕ್ರ ಪೂಜಾ. ಅಂಕುರಾರೋಪಣ, ಪ್ರತಿಮಾಸಂಸ್ಕಾರಾರೋಪಣಪೂಜಾ, ಮಾತೃಕ ಯಂತ್ರಪೂಜಾ, ಔಷಧಿಕಲ್ಪ ಮತ್ತು ಶ್ರುತಾವತಾರ ಈ ಗ್ರಂಥಗಳನ್ನು ರಚಿಸಿರುತ್ತಾರೆ, ಕೊನೆಯಲ್ಲಿ ಧರ್ಮಾಮೃತ ಪ್ರಕಾರದಲ್ಲಿ ಯಾವ ಸಮಯ ದಲ್ಲಿಯಾವ ಕ್ರಿಯೆಯನ್ನು ಮಾಡಬೇಕೆಂಬುದನ್ನು ಧರ್ಮಾಮೃತದ ಆಧಾರ ದಿಂದ ಕೊಡಲಾಗಿದೆ.

ಧರ್ಮಾತ್ಮರಾದ ಶ್ರೀ ಭುಜಬಲಿ ಅಪ್ಪಾರಾವ ಯಲಗುದರಿ, ಮಹೀಶವಾಡಿಗಿ ಇವರು ಈ ಶಾಸ್ತ್ರದ ಪ್ರಕಾಶನವನ್ನು ಮಾಡಿ ಪುಣ್ಯ ಭಾಗಿ ಗಳಾಗಿದ್ದಾರೆ ಅವರಿಗೆ ಅನೇಕ ಧನ್ಯವಾದಗಳನ್ನು ಸಲ್ಲಿಸುತ್ತೇವೆ.

ಇದು ಬೆಂಗಳೂರಿನಲ್ಲಿ ಮೊದಲು ಬಿ. ಪದ್ಮರಾಜ ಪಂಡಿತರಿಂದ ಪ್ರಕಟಗೊಂಡಿತ್ತು ಅದರ ಆಧಾರದ ಮೇಲೆ ಹಾಗೂ ಬಾಹುಬಲಿಯಲ್ಲಿಯ ತಾಲೆಗ್ರಂಥದ ಸಹಾಯದಿಂದಲೂ ಪ್ರಕಾಶಗೊಂಡಿದೆ. ಪಾಠಭೇದವನ್ನೂ ಸಹ ಕೊಡಲಾಗಿದೆ. ಇದರಲ್ಲಿ ಅನೇಕ ತಪ್ಪುಗಳಿರಬಹುದು ವಿದ್ವಾಂಸರು ತಿದ್ದಿಕೊಂಡು ಓದಬೇಕು.

ಭವದೀಯ
ಪದ್ಮರಾಜ ಶಾಸ್ತ್ರೀ

ಧ. ಶ್ರೀ. ಭುಜಬಲಿ ಅಪ್ಪಾರಾವ ಯಲಗುದರಿ

ಇವರ ಅಲ್ಪ ಪರಿಚಯ—

ಇವರು ಮಹೇಶವಾಡಿ (ತಾ. ಅಥಣಿ, ಜಿ ಬೆಳಗಾವ) ಯ ರಹಿವಾಸಿಗಳಿದ್ದು ತಮ್ಮ ಜೀವಮಾನದಲ್ಲಿ ಇದುವರೆಗೆ ಅನೇಕ ಧರ್ಮಕಾರ್ಯಗಳನ್ನು ಯಥಾಶಕ್ತಿ ಮಾಡುತ್ತ ಬಂದಿದ್ದಾರೆ. ತಮ್ಮ ಊರಲ್ಲಿ ಸಾಮಾಜಿಕ, ಧಾರ್ಮಿಕ ಕಾರ್ಯಗಳನ್ನು ಉತ್ಸಾಹದಿಂದ ಮುಂದುವರೆದು ಮಾಡುತ್ತಾರೆ. ಇದಲ್ಲದೆ ಬಾಗೆವಾಡಿ ಗುರುಕುಲ, ಬಾಹುಬಲಿ ಬ್ರಹ್ಮಚರ್ಯಾಶ್ರಮ, ಶೇಡಬಾಳ ಆಶ್ರಮ ಇತ್ಯಾದಿ ಸಂಸ್ಥೆಗಳಿಗೆ ಎಷ್ಟೋ ಸಾವಿರ ರೂಪಾಯಿಗಳ ದಾನಮಾಡಿ ಸಮಾಜಕ್ಕೊಂದು ದೊಡ್ಡ ಉಪಕಾರ ಮಾಡಿದ್ದಾರೆ. ದಾನಶೀಲರಿಗೆ ಒಂದು ಮಾರ್ಗದರ್ಶನ ಮಾಡಿದ್ದಾರೆ. ಇಂಥ ಮಹನೀಯರ ಉದಾರ ದಾನದಿಂದಲೇ ಸಂಸ್ಥೆಗಳ ಸಂಚಾಲನವಾಗುತ್ತದೆ. ಒಬ್ಬ ಕವಿಯು ಹೀಗೆ ಹೇಳಿದ್ದಾನೆ—

ಜದಿ ಚಿತ್ತಂ ಣ ಹಿ ವಿತ್ತಂ ಚಿತ್ತಂ ವಿತ್ತಂ ಚ ಣ ಹಿ ಸುಪುತ್ತೋ ಯ।
ಚಿತ್ತಂ ವಿತ್ತಂ ಪುತ್ತೋ ಪುಣ್ಣೇಣ ವಿಣಾ ಣ ಲಬ್ಭಂತೇ ॥

ಈ ಸಂಸಾರದಲ್ಲಿ ಮನುಷ್ಯರಿಗೆ ಸತ್ಪಾತ್ರರಿಗೆ ದಾನಾದಿ ಕ್ರಿಯೆಗಳನ್ನು ಮಾಡಬೇಕೆಂಬ ಹಂಬಲವಿದ್ದರೂ ಅದಕ್ಕೆ ತಕ್ಕ ವಿತ್ತ ಅಂದರೆ ಸಂಪತ್ತಿ ಇರುವುದಿಲ್ಲ. ಕೆಲವರಿಗೆ ಸಂಪತ್ತಿ ಇದ್ದರೂ ಸತ್ಪಾತ್ರರಿಗೆ ದಾನ ಮಾಡುವ ಬುದ್ಧಿ ಉಂಟಾಗುವುದಿಲ್ಲ. ಚಿತ್ತ ವಿತ್ತಗಳಿದ್ದರೂ ತಮ್ಮ ಕುಲವನ್ನು ಉದ್ಧರಿಸುವ ಸುಪುತ್ರರು ಇರುವುದಿಲ್ಲ. ಚಿತ್ತ ವಿತ್ತ ಮತ್ತು ಸುಪುತ್ರರು ಈ ಮೂರೂ ಪೂರ್ವದ ಪುಣ್ಯೋದಯದ ಹೊರತಾಗಿ ಲಭಿಸುವುದಲ್ಲ. ಆದುದರಿಂದ ನಮ್ಮ ಶ್ರೀ ಭುಜಬಲಿ ಯಲಗುದರಿ ಇವರು ಪೂರ್ವಪುಣ್ಯದಿಂದ ಧರ್ಮಬುದ್ಧಿ, ಸಂಪತ್ತು ಮತ್ತು ಸುಪುತ್ರಾದಿ ಬಳಗವನ್ನೆಲ್ಲ ಹೊಂದಿದ್ದಾರೆ. ಸುಮಾರು ಒಂದು ವರ್ಷ ಮೊದಲಿನಿಂದಲೂ ಪ. ಪೂ. ಮಹಾಬಲ ಮುನಿ

ಮಹಾರಾಜರ ಬಳಿಯಲ್ಲಿ ಆಜನ್ಮ ಬ್ರಹ್ಮಚರ್ಯ ವ್ರತವನ್ನು ಪಡೆದು ಆತ್ಮಕಲ್ಯಾಣಭಾಗಿಗಳಾಗಿದ್ದಾರೆ

ಇವರಿಗೆ ಶ್ರೀ ಸುರೇಂದ್ರಪ್ಪ ಯಲಗುದರಿ ಎಂಬುವ ಚಿಕ್ಕ ಸಹೋದರರೂ, ಸುಪುತ್ರ ಅಪ್ಪಾರಾಯರೂ, ಸಹಧರ್ಮಿಣಿಯರಾದ ಸೌ. ಕುಸುಮಾವತಿಯವರೂ, ಐದು ಜನ ಹೆಣ್ಣು ಮಕ್ಕಳೂ ಇದ್ದಾರೆ. ಎಲ್ಲರೂ ಧರ್ಮಾನುರಾಗಿಗಳೂ ಆಗಿದ್ದಾರೆ. "ನ ಧರ್ಮೋ ಧಾರ್ಮಿಕೈರ್ವಿನಾ" ಅಂದರೆ ಧರ್ಮಾತ್ಮರಿಲ್ಲದೆ ಧರ್ಮವಿಲ್ಲ ಎಂಬ ಉಕ್ತಿಯು ಸಾರ್ಥಕವಾಗಿದೆ. ಅವರಿದ್ದರೇನೇ ಧರ್ಮವು ನಡೆಯಬಲ್ಲದು. ಇಂಥ ಧರ್ಮಾತ್ಮರು ಈ ಪಂಚಮ ಕಾಲದಲ್ಲಿಯೂ ಸಹ ಇದ್ದಾರೆಂತಲೇ ಧರ್ಮ ಪ್ರವೃತ್ತಿಯು ಜನರಲ್ಲಿ ಕಂಡು ಬರುತ್ತದೆ. ಇವರು ಈ ಪುಸ್ತಕವನ್ನು ಪ್ರಕಾಶ ಪಡಿಸಲು ತಮ್ಮ ಉದಾರ ಅಂತಃಕರಣದಿಂದ ನಮ್ಮ ಈ ಸನ್ಮತಿ ಪ್ರಕಾಶನ ನಿಧಿಗೆ ೯೫೦ ರೂಪಾಯಿಗಳನ್ನು ನೀಡಿದ್ದಾರೆ. ಈ ಪುಸ್ತಕವು ಗಾತ್ರದಲ್ಲಿ ಸಣ್ಣದಿದ್ದರೂ ಮುನಿ ಧರ್ಮದ ಸ್ವರೂಪವನ್ನು ಹಾಗೂ ಮುನಿಗಳು ಹೇಗೆ ವರ್ತಿಸಬೇಕೆಂಬ ವಿಚಾರವನ್ನು ಶ್ರೀ ಇಂದ್ರನಂದಿ ಆಚಾರ್ಯರು ಸುಲಭವಾಗಿ ವರ್ಣಿಸಿದ್ದಾರೆ. ಉಕ್ತ ಮಹಾನುಭಾವರಿಗೆ ಸನ್ಮತಿಪ್ರಕಾಶನದ ವತಿಯಿಂದ ಅನೇಕ ಧನ್ಯವಾದಗಳನ್ನು ಸಲ್ಲಿಸುತ್ತೇವೆ.

ಪದ್ಮರಾಜ ಶಾಸ್ತ್ರೀ.

ನೀತಿಸಾರ ಸಮುಚ್ಚಯದ ವಿಷಯಾನುಕ್ರಮಣಿಕೆ

ಶ್ರೀವೀತರಾಗಾಯ ನಮಃ

ನಿರ್ಗ್ರಂಥ

ಸಮಯಭೂಷಣಮ್

ಅಪರನಾಮ ನೀತಿಸಾರಸಮುಚ್ಚಯಃ

ಇಂದ್ರನಂದ್ಯಾಚಾರ್ಯರು ಜಿನರಿಗೆ ನಮಸ್ಕರಿಸಿ ತಪಸ್ವಿಗಳಿಗೆ ನೀತಿಯನ್ನು ಹೆಳುವ ಪ್ರತಿಜ್ಞೆ ಮಾಡುತ್ತಾರೆ.

ಪ್ರಣಮ್ಯ ತ್ರಿಜಗನ್ನಾಥಾನಿಂದ್ರವಂದಿತ 1 ಸಂಪದಃ।
ಅನಗಾರಾನ್ ಪ್ರವಕ್ಷ್ಯಾಮಿ ನೀತಿಸಾರಸಮುಚ್ಚಯಮ್ ॥೧॥

ಅರ್ಥ- ಚತುರ್ಣಿಕಾಯಗಳ ಇಂದ್ರರಿಂದ ವಂದಿಸಲ್ಪಟ್ಟ ಅನಂತಜ್ಞಾನ, ಅನಂತದರ್ಶನ, ಅನಂತಸುಖ ಮತ್ತು ಅನಂತವೀರ್ಯಗಳೆಂಬ ಆಂತರಂಗ ಸಂಪತ್ತುಳ್ಳವರೂ ಮತ್ತು ಬಾಹ್ಯವಾದ ಸಮಸರಣ ಅಷ್ಟಪ್ರತಿಹಾರ್ಯಾದಿ ವೈಭವ ಉಳ್ಳವರೂ, ಮೂರು ಲೋಕಗಳಿಗೆ ಒಡೆಯರೂ ಆದ ಅರ್ಹತ್ಪರಮೇಷ್ಠಿಗಳನ್ನು ನಮಸ್ಕರಿಸಿ, ಅನಗಾರರನ್ನುದ್ದೇಶಿಸಿ ನೀತಿಸಾರಸಮುಚ್ಚಯವನ್ನು ಅಂದರೆ ನೀತಿಗಳ ಸಾರಭೂತವಾದ ಸಂಗ್ರಹವನ್ನು ಹೇಳುತ್ತೇನೆ ಎಂದು ಗ್ರಂಥಕಾರ ಇಂದ್ರನಂದಿಗಳು ಹೇಳುತ್ತಾರೆ. ಅಂದರೆ ಮುನಿಗಳು ಹೇಗೆ ವರ್ತಿಸಬೇಕು, ಅವರ ನೀತಿ ಏನು? ಎಂಬುದನ್ನು ವರ್ಣಿಸುತ್ತಾರೆ.

ಕಲಿಕಾಲದ ಮಾಹಾತ್ಮ್ಯ

ಭರತೇ ಪಂಚಮೇ ಕಾಲೇ ನಾನಾಸಂಘಸಮಾಕುಲಮ್ ।
ವೀರಸ್ಯ 2 ಶಾಸನಂ ಜಾತಂ ವಿಚಿತ್ರಾಃ ಕಾಲಶಕ್ತಯಃ ॥೨॥

---

1) ನಂದಿತ 2) ಜಿನಸ್ಯ ಇತಿಪಾಠಾಂತರಂ

ಅರ್ಥ- ದುಃಷಮನೆಂಬ ಈ ಪಂಚಮಕಾಲದಲ್ಲಿ ಭರತ ಕ್ಷೇತ್ರದಲ್ಲಿ ವೀರಜಿನೇಂದ್ರನ ಶಾಸನವು ಅನೇಕ ಸಂಘಗಳಿಂದ ವ್ಯಾಪ್ತವಾಯಿತು. ಅಂದರೆ ಅನೇಕ ಆಚಾರ್ಯರ ಮತಭೇದದಿಂದ ಅನೇಕ ಸಂಘಗಳಾದುವು. ಏಕೆಂದರೆ ಕಾಲಶಕ್ತಿಗಳು ವಿಚಿತ್ರವಾಗಿವೆ. ಅಂದರೆ ಈ ಹುಂಡಾವಸರ್ಪಿಣೀ ಕಾಲದ ದೋಷದಿಂದ ವೀರಜಿನನ ಶಾಸನದಲ್ಲಿ ಅನೇಕ ಸಂಘಭೇದಗಳಾದುವು.

ಪ್ರಜೆಗಳು ಯಾವಾಗ ಸ್ವಚ್ಛಂದರಾದರು ?

ಸ್ವರ್ಗಂ ಗತೇ ವಿಕ್ರಮಾರ್ಕೇ 1 ಭದ್ರಬಾಹೌ ಚ ಯೋಗಿನಿ।
ಪ್ರಜಾಃ ಸ್ವಚ್ಛಂದಚಾರಿಣ್ಯೋ 2ಬಭೂವುಃ ಪಾಪಮೋಹಿತಾಃ ॥೩॥

ಅರ್ಥ- ವಿಕ್ರಮಾರ್ಕರಾಜನು ಹಾಗೂ ಐದನೆಯ ಶ್ರುತಕೇವಲಿಯಾದ ಭದ್ರಬಾಹು ಯೋಗಿಯೂ ಸ್ವರ್ಗವನ್ನು ಪಡೆಯಲಾಗಿ, ತರುವಾಯ ಪ್ರಜೆಗಳು ಪಾಪಕರ್ಮದಲ್ಲಿ ಮೋಹಿತರಾಗಿ ಸ್ವೈರಾಚಾರಿಗಳಾದರು.

ಮುನಿಗಳ ಅತಿಕ್ರಮ

ಯತೀನಾಂ ಬ್ರಹ್ಮನಿಷ್ಠಾನಾಂ ಪರಮಾರ್ಥವಿದಾಮಪಿ ।
ಸ್ವಪರಾಧ್ಯವಸಾಯಿತ್ವ 3 ಮಾವಿರಾಸೀದತಿಕ್ರಮಮ್ ॥೪॥

ಅರ್ಥ-ಆತ್ಮಸ್ವರೂಪದಲ್ಲಿ ತತ್ಪರರೂ ಪರಮಾರ್ಥವನ್ನು ತಿಳಿಯುವವರೂ ಆದ ಯತಿಗಳದೂ ಸಹ ಆತ್ಮಧ್ಯಾನ ಮತ್ತು ಬಾಹ್ಯತಪಸ್ಸುಗಳಲ್ಲಿ ವ್ಯವಸಾಯ ಮಾಡುಕೆಯು ಉಲ್ಲಂಘನವಾಗಹತ್ತಿತು, ಅಂದರೆ ನಿಬಂಧನೆಯಿಲ್ಲದ್ದಾಯಿತು.

ಸಂಘಭೇದಕ್ಕೆ ಕಾರಣ

ತದಾ ಸರ್ವೋಪಕಾರಾಯ ಜಾತಿಸಂಕರಭೀರುಭಿಃ ।
ಮಹದ್ಭಿರ್ಕೈಃ ಪರಂ ಚಕ್ರೇ ಗ್ರಾಮಾದ್ಯಭಿಧಯಾ ಕುಲಮ್ ॥೫॥

ಅರ್ಥ- ಹೀಗೆ ಮೇಲೆ ಹೇಳಿದಂತೆ ಅತಿಕ್ರಮವಾಗುತ್ತಿರುವಾಗ ಎಲ್ಲರ ಉಪಕಾರಕ್ಕೋಸ್ಕರ ವರ್ಣ ಜಾತಿ ಮೊದಲಾದವುಗಳಲ್ಲಿ ಸಂಕರತೆಯು ಉಂಟಾಗುವುದೆಂದು ಭಯಗ್ರಸ್ತರಾದ ಬುದ್ಧಿಸಂಪನ್ನರಾದ ರಾಜರ್ಷಿ,

---

1 ವಿಕ್ರಮಾಂಕೇ 2 ಕಾರಿಣ್ಯೋ 3 ಸ್ವಪರಾಧ್ಯವಸಾಯಿತ್ವಂ ಇತಿಪಾಠಾಂತರಂ.

ದೇವರ್ಷಿ, ಪರಮರ್ಷಿ, ಬ್ರಹ್ಮರ್ಷಿ ಮಹಾಮುನಿಗಳು ಗ್ರಾಮ ನೊದಲಾದ ಹೆಸರಿನಿಂದ ಬೇರೆ ಬೇರೆ ಶಿಷ್ಯಮುನಿಗಳ ಕುಲ–ಸಂಸ್ತ್ಯಾಯ ಅಂದರೆ ಗುಂಪನ್ನು ಮಾಡಿದರು, ಅಂದರೆ ಒಂದೊಂದು ಗುಂಪಿಗೆ ನಂದಿಸಂಘ, ಸೇನಸಂಘ ಇತ್ಯಾದಿ ಒಂದೊಂದು ಹೆಸರಿಟ್ಟರು. ||೫||

ಸಂಘ ಸಂಘಟನೆ ಮಾಡಿದವರು

ತದೈವ ಯತಿರಾಜೋऽಪಿ ಸರ್ವನೈಮಿತ್ತಿಕಾಗ್ರಣೀಃ ।
ಅರ್ಹದ್ವಲಿಗುರುಶ್ಚಕ್ರೇ ಸಂಘಸಂಘಟನಂ ಪರಮ್ ॥೬॥

ಅರ್ಥ– ಆದೇ ಸಮಯದಲ್ಲಿ ಎಲ್ಲ ನಿಮಿತ್ತಜ್ಞರಲ್ಲಿ ಪ್ರಮುಖನಾದ ಅರ್ಹದ್ಬಲಿಗುರುವು ಎಲ್ಲ ಯತಿಗಳ ರಾಜನಾದಾಗ್ಯೂ ಸಹ ಅತಿಶಯವಾಗಿ ಸಂಘಗಳ ಸಂಘಟನೆಯನ್ನು ಅಂದರೆ ಪ್ರತ್ಯೇಕ ಪ್ರತ್ಯೇಕ ಮುನಿ ಜನರ ಗುಂಪುಗಳ ಸೇರ್ವಿಕೆಯನ್ನು ನಿರ್ಮಾಣಮಾಡಿದನು. ||೬||

ಆ ಸಂಘಭೇದಗಳ ಹೆಸರು

ಸಿಂಹಸಂಘೋ ನಂದಿಸಂಘಸ್ಸೇನಸಂಘೋ ಮಹಾಪ್ರಭಃ ।
ದೇವಸಂಘ ಇತಿ ಸ್ಪಷ್ಟಂ ಸ್ಥಾನಸ್ಥಿತಿವಿಶೇಷತಃ ॥೭॥
ಗಣಗಚ್ಛಾದಯಸ್ತೇಭ್ಯೋ ಜಾತಾಃ ಸ್ವಪರಸೌಖ್ಯದಾಃ ।
ನ ತತ್ರ ಭೇದಃ ಕೋऽಪ್ಯಸ್ತಿ ಪ್ರವ್ರಜ್ಯಾದಿಷು ಕರ್ಮಸು ॥೮॥

ಅರ್ಥ:– ಸ್ಥಾನ ಮತ್ತು ಸ್ಥಿತಿ ಅಂದರೆ ಪರಿಸ್ಥಿತಿಗಳ ವಿಶೇಷದಿಂದ ಮಹಾತೇಜಸ್ವಿಗಳಾದ ಸಿಂಹಸಂಘ, ನಂದಿಸಂಘ, ಸೇನಸಂಘ ಮತ್ತು ದೇವ ಸಂಘ ಎಂದು ಮುನಿಗಳ ನಾಲ್ಕು ಸಂಘಗಳಾದುವು. ಮತ್ತೆ ಆ ಸಂಘಗಳ ದೆಸೆಯಿಂದ ಸ್ಪಷ್ಟವಾಗಿ ತಮಗೂ ಪರರಿಗೂ ಸೌಖ್ಯವನ್ನು ಕೊಡುವಂಥ ಗಣ ಗಚ್ಛ ಮೊದಲಾದ ಭೇಧಗಳು ಹುಟ್ಟಿದುವು. ಆ ಸಂಘಗಳಲ್ಲಿ ಮುನಿದೀಕ್ಷಾ ಮೊದಲಾದ ಕ್ರಿಯೆಗಳಲ್ಲಿ ಯಾವುದೇ ಭೇದವು ಇಲ್ಲ. ಅಂದರೆ ಮೂಲಸಂಘದಲ್ಲಿದ್ದಂತೆಯೇ ದೀಕ್ಷಾವಿಧಿ, ವ್ರತಪಾಲನೆ ಮುಂತಾದುವುಗಳು ಸಮಾನವಾಗಿವೆ. ||೭|| ||೮||

ಮಾನಕಷಾಯದಿಂದುಂಟಾದ ಸಂಘಗಳು

ಕಿಯತ್ಯಪಿ ತತೋऽತೀತೇ ಕಾಲೇ ಶ್ವೇತಾಂಬರೋऽಭವತ್ ।
ದ್ರಾವಿಡೋ ಯಾಪನೀಯಶ್ಚ ಕಾಷ್ಠಾ 1 ಸಂಘಶ್ಚ ಮಾನತಃ ॥೯॥

ಅರ್ಥ- ಮೇಲೆ ಹೇಳಿದ ಸಂಘಗಳ ಹೊರತಾಗಿ ಎಷ್ಟೋ ಕಾಲ ಕಳೆದು ಹೋಗಲಾಗಿ ಮಾನ ಅಂದರೆ ಅಹಂಕಾರದಿಂದ ಶ್ವೇತಾಂಬರ ದ್ರಾವಿಡ ಯಾಪನೀಯ ಮತ್ತು ಕಾಷ್ಠಾಸಂಘವೆಂದು ಮತ್ತೆ ನಾಲ್ಕು ಸಂಘಗಳು ಹುಟ್ಟಿದುವು. ॥೯॥

ಜೈನಾಭಾಸಗಳು

ಗೋಪುಚ್ಛಕಃ ಶ್ವೇತವಾಸಾ ದ್ರಾವಿಡೋ ಯಾಪನೀಯಕಃ ।
ನಿಷ್ಪಿಂಚ್ಛ2 ಶ್ಚೇತಿ ಪಂಚೈತೇ ಜೈನಾಭಾಸಾಃ ಪ್ರಕೀರ್ತಿತಾಃ ॥೧೦॥

ಅರ್ಥ-- ಹಸುವಿನಬಾಲದ ಕೂದಲುಗಳನ್ನು ಪಿಂಚ್ಛವನ್ನಾಗಿಧರಿಸುವವನು, ಶ್ವೇತಾಂಬರನು, ದ್ರಾವಿಡನು, ಯಾಪನೀಯನು. ಪಿಂಚ್ಛಿ ಇಲ್ಲದವನು, ಈ ಐದು ಪ್ರಕಾರದ ಮುನಿಗಳು ಜೈನಾಭಾಸರೆಂದು ಹೇಳಲ್ಪಟ್ಟಿದ್ದಾರೆ. ಅಂದರೆ ಇವರು ಮೂಲ ಸಂಘದಿಂದ ಬಾಹ್ಯರಾಗಿ ತಮ್ಮ ಇಚ್ಛಾನುಸಾರ ಜೈನ ಮಾರ್ಗದಲ್ಲಿ ವಿಪರೀತತೆಯನ್ನುಂಟು ಮಾಡಿದುದರಿಂದ ಜೈನಾಭಾಸರಾಗಿ ಹೇಳಲ್ಪಡುತ್ತಾರೆ ॥೧೦॥

ಜೈನಾಭಾಸಕ್ಕೆ ಕಾರಣ

ಸ್ವಸ್ವಮತ್ಯನುಸಾರೇಣ ಸಿದ್ಧಾಂತಂ ವ್ಯಭಿಚಾರಿಣಮ್ ।
ವಿರಚ್ಯ ಚ ಜಿನೇಂದ್ರಸ್ಯ ಮಾರ್ಗಂ ನಿರ್ಭೇದಯಂತಿ ತೇ ॥೧೧॥

ಅರ್ಥ- ಆ ಶ್ವೇತಾಂಬರ, ದ್ರಾವಿಡ ಮೊದಲಾದ ಸಂಘಗಳು ವ್ಯಭಿಚಾರಿ ಅಂದರೆ ದೋಷಯುಕ್ತವಾದ ಸಿದ್ಧಾಂತವನ್ನು ತಮ್ಮ ತಮ್ಮ ಬುದ್ಧಿಗನುಸಾರವಾಗಿ ಆಂದರೆ ತಮ್ಮ ಇಚ್ಛಾನುಸಾರವಾಗಿ ಕೆಲವು ಕಲ್ಪಿತಸಿದ್ಧಾಂತವನ್ನು ರಚಿಸಿ ಜಿನೇಂದ್ರನ ಸನ್ಮಾರ್ಗ-ಮೊಕ್ಷಮಾರ್ಗವನ್ನು ಭೇದಿಸು

1) ಕಾಷ್ಠ, 2) ನಿಃಪಿಂಚ್ಛಃ, ಇತಿಪಾಠಭೇದಃ

ತ್ತಿದ್ದಾರೆ. ಅಂದರೆ ಜಿನೇಶ್ವರನು ತೋರಿಸಿದ ಮೋಕ್ಷಮಾರ್ಗದಲ್ಲಿ ಒಡಕನ್ನು ಉಂಟುಮಾಡಿದ್ದಾರೆ. ಆದುದರಿಂದ ಇವರು ಯಥಾರ್ಥ ಜೈನ ಸಂಘಗಳಾಗದೆ ಜೈನಾಭಾಸಗಳೆಂದು ಹೇಳಲಾಗಿವೆ.

ಭೇದ ಭಾವನೆ ಮಾಡುವವನು ಮಿಥ್ಯಾದೃಷ್ಟಿ

ಚತುಸ್ಸಂಘ್ಯಾಂ 1 ನರೋ ಯಸ್ತು ಕುರುತೇ ಭೇದಭಾವನಾಮ್ ।
ಸ ಸಮ್ಯಗ್ದರ್ಶನಾತೀತಃ ಸಂಸಾರೇ ಸಂಚರತ್ಯರಮ್ 2 ॥೧೨॥

ಅರ್ಥ– ಈ ಮೂಲ ನಾಲ್ಕು ಸಂಘಗಳಲ್ಲಿ ಯಾವ ಮನುಷ್ಯನು ಶ್ವೇತಾಂಬರಾದಿಗಳಂತೆ ಭೇದಭಾವನೆಯನ್ನು ಮಾಡುತ್ತಾನೆಯೋ ಆತನು ಸಮ್ಯಗ್ದರ್ಶನವನ್ನುಅತಿಕ್ರಮಿಸಿದವನಾಗಿದ್ದಾನೆ ಮತ್ತು ಸಂಸಾರದಲ್ಲಿ ಅತಿಶಯವಾಗಿ ಅಲೆದಾಡುತ್ತಾನೆ. ಅಂದರೆ ಅವನು ಮಿಥ್ಯಾದೃಷ್ಟಿ—ಯಥಾರ್ಥ ವಸ್ತುಸ್ವರೂಪವನ್ನು ತಿಳಿಯುವುದಿಲ್ಲ. ॥೧೨॥

ಈ ಸಂಘಗಳಲ್ಲಿ ಪ್ರತಿಕ್ರಮಣಾದಿಗಳಲ್ಲಿ ಭೇದವಿಲ್ಲ

ನಾತ್ರ ಪ್ರತಿಕ್ರಮೋ ಭೇಧೋ ನ ಪ್ರಾಯಶ್ಚಿತ್ತಕರ್ಮಣಿ ।
ನಾಚಾರವಾಚನಾದ್ಯುಧ್ವವಾಚನಾಸು ವಿಶೇಷತಃ ॥೧೩॥

ಅರ್ಥ– ಈ ನಾಲ್ಕು ತರದ ಮೂಲ ಸಂಘದಲ್ಲಿ ಪ್ರತಿಕ್ರಮದಲ್ಲಿ, ಪ್ರಾಯಶ್ಚಿತ್ತ ಕ್ರಿಯೆಯಲ್ಲಿ ವಿಶೇಷರೀತಿಯಿಂದ ಆಚಾರವಾಚನ ಮೊದಲಾದ ಪ್ರಶಸ್ತವಾಚನಕ್ರಿಯೆಗಳಲ್ಲಿ ಯಾವುದೇ ಭೇದವಿಲ್ಲ. ಅಂದರೆ ಈ ನಾಲ್ಕು ಸಂಘಗಳಲ್ಲಿ ಪ್ರತಿಕ್ರಮ ಪ್ರಾಯಶ್ಚಿತ್ತ ಮೊದಲಾದ ಕ್ರಿಯೆಗಳು ಸಮಾನವಾಗಿವೆ, ಒಂದೆ ವಿಧವಾಗಿವೆ. ॥೧೩॥

ಅನ್ಯಸಂಘದಿಂದ ಪ್ರತಿಷ್ಠಿತ ಬಿಂಬಗಳು ವಂದನೀಯವಿಲ್ಲ.

ಚತುಃಸಂಘ್ಯಾಂ3 ಸಂಹಿತಯಾ ಜೈನಂ ಬಿಂಬಿಂ ಪ್ರತಿಷ್ಠಿತಮ್ ।
ನಮೇನ್ನಾಪರಸಂಘೀಯಂ ಯತೋ ನ್ಯಾಸವಿಪರ್ಯಯಃ ॥೧೪

ಅರ್ಥ– ಈ ನಂದಿಸಂಘಾದಿ ನಾಲ್ಕು ಮೂಲ ಸಂಘಗಳಲ್ಲಿ ಹೇಳಿದ ಸಂಹಿತಾಶಾಸ್ತ್ರದಿಂದ ಪ್ರತಿಷ್ಠಿಸಲ್ಪಟ್ಟ ಜೈನಬಿಂಬಕ್ಕೆ ನಮಸ್ಕರಿಸಬೇಕು.

---

1) ಚತುಸಂಘ್ಯೋ 2) ಸಂಚರತ್ಯಸೌ 3) ಚತುಃಸಂಘೇ

ಏಕಂದರೆ ಅನ್ಯಸಂಘಗಳಿಂದ ಪ್ರತಿಷ್ಠಿತವಾದ ಬಿಂಬದಲ್ಲಿ ನ್ಯಾಸವು ವಿಪರೀತವಾಗಿದೆ. ಅದುದರಿಂದ ಅನ್ಯಸಂಘದ ಪ್ರತಿಷ್ಠಾಶಾಸ್ತ್ರಾನುಸಾರ ಪ್ರತಿಷ್ಠಿತ ಜಿನಬಿಂಬವು ಪೂಜ್ಯವಾಗುವುದಿಲ್ಲವು. ||೧೪||

ಆಚಾರ್ಯರ ಸ್ವರೂಪ

ಪಂಚಾಚಾರರತೋ ನಿತ್ಯಂ ಮೂಲಾಚಾರವಿದಗ್ರಣೀಃ ।
ಚಾತುರ್ವರ್ಣ್ಯಸ್ಯ1 ಸಂಘಸ್ಯ ಯಸ್ಸ ಆಚಾರ್ಯ ಉಚ್ಯತೇ2 ||೧೫||

ಅರ್ಥ ಯಾವಾಗಲೂ ಜ್ಞಾನಾಚಾರ, ದರ್ಶನಾಚಾರ, ವೀರ್ಯಾಚಾರ ಚಾರಿತ್ರಾಚಾರ ಮತ್ತು ತಪ ಆಚಾರ ಎಂಬ ಐದು ಆಚಾರಗಳಲ್ಲಿ ತತ್ಪರನೂ, ಅಚೇಲಕ್ಯ (ವಸ್ತ್ರತ್ಯಾಗ) ಮೊದಲಾದ ಮೂಲಾಚಾರಗಳನ್ನೂ ಅಂದರೆ ೨೮ ಮೂಲಗುಣಗಳನ್ನು ತಿಳಿದವನೂ ಮತ್ತು ಮುನಿ, ಆರ್ಯಿಕಾ, ಶ್ರಾವಕ, ಶ್ರಾವಿಕೆ ಎಂಬ ನಾಲ್ಕುವಿಧ ಸಂಘದ ಸಂಚಾಲನದಲ್ಲಿ ಪ್ರಮುಖನೂ ಯಾವನು ಆಗಿರುತ್ತಾನೆಯೋ ಆ ಮುನಿಯು ಆಚಾರ್ಯನೆಂದು ಹೇಳಲ್ಪಡುತ್ತಾನೆ. ||೧೫||

ಉಪಾಧ್ಯಾಯರ ಲಕ್ಷಣ

ಅನೇಕನಯಸಂಕೀರ್ಣಶಾಸ್ತ್ರಾರ್ಥವ್ಯಾಕೃತಿಕ್ಷಮಃ ।
ಪಂಚಾಚಾರರತೋ ಜ್ಞೇಯ ಉಪಾಧ್ಯಾಯಸ್ಸಮಾಹಿತೈ: ।೧೬||

ಅರ್ಥ– ದ್ರವ್ಯಾರ್ಥಿಕ, ಪರ್ಯಾಯಾರ್ಥಿಕ, ವ್ಯವಹಾರ ಮತ್ತು ನಿಶ್ಚಯ ಮೊದಲಾದ ಅನೇಕ ನಯಗಳಿಂದ ವ್ಯಾಪ್ತವಾದ ಶಾಸ್ತ್ರಗಳ ಅರ್ಥವನ್ನು ವ್ಯಾಖ್ಯಾನಮಾಡುವುದರಲ್ಲಿ ಸಮರ್ಥನೂ, ದರ್ಶನಾಚಾರ ಮೊದಲಾದ ಐದು ಆಚಾರಗಳಲ್ಲಿ ಉದ್ಯಮಶೀಲನೂ ಆದ ಮುನಿಯು ವಿದ್ವಾಂಸರಿಂದ ಉಪಾಧ್ಯಾಯನೆಂದು ಹೇಳಲ್ಪಡುತ್ತಾನೆ. ಇಲ್ಲಿ ನಯದ ಲಕ್ಷಣವನ್ನು ಹೇಳುತ್ತಾರೆ—ಪ್ರಮಾಣಪರಿಗೃಹೀತವಸ್ತ್ವೇಕದೇಶಾಧ್ಯವಸಾಯೋ ವಾ, ನಾನಾಸ್ವಭಾವೇಭ್ಯೋ ವ್ಯಾವೃತ್ಯೈಕಸ್ಮಿನ್ ಸ್ವಭಾವೇ ವಸ್ತು ನಯತೀತಿ ವಾ, ಗುಣಪರ್ಯಾಯಾನ್ ದ್ರವ್ಯಂ ನಯತೀತಿ, ಜ್ಞಾತುರಭಿಪ್ರಾಯೋ ವಾ

1) ಚತುರ್ವರ್ಣಸ್ಯ. 2) ಇಷ್ಯತೇ.

ನಯ: ಅಂದರೆ ಪ್ರಮಾಣದಿಂದ ಪರಿಗ್ರಹಿಸಲ್ಪಟ್ಟ ವಸ್ತುವಿನ ಒಂದು ಅಂಶವನ್ನು ತಿಳಿಯುವಂಥಾದ್ದು ನಯ, ಅಥವಾ ಅನೇಕ ಸ್ವಭಾವಗಳ ದೆಸೆಯಿಂದ ಪರಾವೃತ್ತಮಾಡಿ ಒಂದೇ ಸ್ವಭಾವದಲ್ಲಿ ವಸ್ತುವನ್ನು ಯಾವುದು ಒಯ್ಯುತ್ತದೆಯೋ ಅದು ನಯ, ಅಥವಾ ಗುಣಪರ್ಯಾಯಗಳನ್ನು ದ್ರವ್ಯದತ್ತವೂ ದ್ರವ್ಯವನ್ನು ಗುಣಪರ್ಯಾಯದತ್ತವೂ ಒಯ್ಯುವುದು ನಯ, ಅಥವಾ ವಸ್ತುಸ್ವರೂಪವನ್ನು ತಿಳಿದುಕೊಳ್ಳುವವನ ಅಭಿಪ್ರಾಯಕ್ಕೆ ನಯವೆಂದು ಹೆಸರು. ಈ ನಯಗಳು ಸಾಮಾನ್ಯವಾಗಿ ೪೭ ಇವೆ. ಇವುಗಳ ವಿವರವನ್ನು ಪದಾರ್ಥಸಾರಗ್ರಂಥದಲ್ಲಿ ನೋಡಬೇಕು. ||-೬||

ಸಾಧುಲಕ್ಷಣ

ಸರ್ವದ್ವಂದ್ವವಿನಿರ್ಮುಕ್ತೋ ವ್ಯಾಖ್ಯಾನಾದಿಷು ಕರ್ಮಸು |
ವಿರಕ್ತೋ ಮೌನವಾನ್ಧ್ಯಾನೀ ಸಾಧುರಿತ್ಯಭಿಧೀಯತೇ ||೧೭||

ಅರ್ಥ- ಸಮಸ್ತಬಾಹ್ಯಪದಾರ್ಥಗಳಲ್ಲಿಯ ನನ್ನದು ನಿನ್ನದು ಎನ್ನುವ ಭಾವ ಇಲ್ಲದವನೂ ಶಾಸ್ತ್ರವ್ಯಾಖ್ಯಾನ, ಉಪದೇಶ ಮೊದಲಾದ ಕ್ರಿಯೆಗಳಲ್ಲಿ ವಿರಕ್ತನೂ, ಮೌನವನ್ನು ಧರಿಸಿದವನೂ, ಧರ್ಮ್ಯಧ್ಯಾನ—ಶುಕ್ಲಧ್ಯಾನಗಳುಳ್ಳವನೂ ಆದ ಮುನಿಯು ಸಾಧುಪರಮೇಷ್ಠಿ ಎಂದು ಹೇಳಲ್ಪಡುತ್ತಾನೆ. ಅಂದರೆ ಸಂಪೂರ್ಣವಾಗಿ ಬಾಹ್ಯ ವ್ಯಾಪಾರವನ್ನು ಬಿಟ್ಟು ಕೇವಲ ತನ್ನ ಶುದ್ಧಾತ್ಮಸ್ವರೂಪದಲ್ಲಿ ಲೀನನಾಗಿ ಧ್ಯಾನಮಾಡುವಂಥ ಯೋಗಿಯು ಸಾಧುಪರಮೇಷ್ಠಿ ಎಂದು ಹೇಳಲ್ಪಡುತ್ತಾನೆ. ||-೭||

ಭಟ್ಟಾರಕರ ಲಕ್ಷಣ

ಸರ್ವಶಾಸ್ತ್ರಕಲಾಭಿಜ್ಞೋ ನಾನಾಗಚ್ಛಾಭಿವರ್ಧಕಃ |
ಮಹಾತಪಃಪ್ರಭೋದ್ಭಾಸೀ 1 ಭಟ್ಟಾರಕ ಇತೀಷ್ಯತೇ ||೧೮||

ಅರ್ಥ- ಸಮಸ್ತಶಾಸ್ತ್ರ ಮತ್ತು ಸಮಸ್ತಕಲೆಗಳನ್ನು ಬಲ್ಲವನೂ, ಅನೇಕ ಗಚ್ಛಗಳನ್ನು ವೃದ್ಧಿಪಡಿಸುವವನೂ ಅಂದರೆ ಪೋಷಿಸುವವನೂ

1) ಪ್ರಭಾಭಾಸೀ.

ಮತ್ತು ದೊಡ್ಡ ತಪಸ್ಸಿನ ತೇಜದಿಂದ ಹೊಳೆಯುವವನೂ ಆದ ಯತಿಯು ಭಟ್ಟಾರಕನೆಂದು ಮಾನಿಸಲ್ಪಡುತ್ತಾನೆ. ।೧೮॥

ಸ್ವಾಮಿಲಕ್ಷಣ

ತತ್ತ್ವಾರ್ಥಸೂತ್ರವ್ಯಾಖ್ಯಾತಾ ಸ್ವಾಮೀತಿ ಪರಿಪಠ್ಯತೇ ।
ಅಥ ಕ್ರಿಯಾಕಲಾಪಸ್ಯ ಕರ್ತಾ ವಾ ಮುನಿಸತ್ತಮಃ ॥೧೯॥

ಅರ್ಥ- ತತ್ತ್ವಾರ್ಥ ಸೂತ್ರದ ವ್ಯಾಖ್ಯಾನ ಅಂದರೆ ವಿಶದವಾಗಿ ಅರ್ಥ ಬೋಧವನ್ನು ಮಾಡಿಕೊಡುವಂಥ ಮಹಾಜ್ಞಾನಿ ಮುನಿಯು ಸ್ವಾಮಿ ಎಂದು ಹೇಳಲ್ಪಡುತ್ತಾನೆ. ಉದಾಹರಣಾರ್ಥವಾಗಿ ಸಮಂತಭದ್ರಾಚಾರ್ಯರು, ವಿದ್ಯಾನಂದ್ಯಾಚಾರ್ಯರು ಮತ್ತು ಭಟ್ಟಾಕಲಂಕರು ಪೂಜ್ಯಪಾದ ಇವರು ತತ್ವಾರ್ಥ ಸೂತ್ರದ ಮೇಲೆ ವಿಶದವ್ಯಾಖ್ಯಾನವನ್ನು ಬರೆದುದ್ದರಿಂದ ಸ್ವಾಮಿ ಎಂದು ಹೇಳಲ್ಪಡುತ್ತಾರೆ ಅಥವಾ ಕ್ರಿಯಾಕಲಾಪದ ಕರ್ತೃವಾದ ಮುನಿ ಶ್ರೇಷ್ಠನು ಸ್ವಾಮಿ ಎಂದು ಹೇಳಲ್ಪಡುತ್ತಾನೆ. ದಶಭಕ್ತ್ಯಾದಿ ಸ್ತೋತ್ರಗಳನ್ನು ರಚಿಸಿದ ಪೂಜ್ಯಪಾದಸ್ವಾಮಿ ಮೊದಲಾದವರು. ॥೧೯॥

ಬೋಧನೆಯ ಯೋಗ್ಯತೆ ಯಾರಿಗಿಲ್ಲ

ನೂತನಸ್ಯಾಗ್ರ 1 ಶಿಷ್ಯಷ್ಯ ಕ್ಷಮಾಧ್ಯಯನಶಾಲಿನಃ ।
ಮುಖಶುದ್ಧ್ಯಾದಿಕಂ ನೈವ2 ಯಾವನ್ನ ಗುರುಣೋಚ್ಯತೇ॥೨೦॥

ಅರ್ಥ- ಎಲ್ಲಿಯ ತನಕ ಗುರುವಿನಿಂದ ಹೇಳಲ್ಪಡುವುದಿಲ್ಲ ಅಂದರೆ ಗುರುವು ಎಲ್ಲಿಯ ವರೆಗೆ ಆದೇಶ ಮಾಡುವುದಿಲ್ಲವೋ ಅಲ್ಲಿಯ ತನಕ ಕ್ಷಮೆ, ಅಧ್ಯಯನ ಮೊದಲಾದುವುಗಳಿಂದ ಶೋಭಿಸುತ್ತಿರುವ ಹೊಸಬನಾದ ಮುಖ್ಯ ಶಿಷ್ಯನಿಗೆ ಮುಖಶುದ್ಧಿ ಮೊದಲಾದದ್ದು ಇಲ್ಲ. ಅಂದರೆ ವಾಕ್ ಶುದ್ಧಿ ಆತನಿಗೆ ಇಲ್ಲ. ಆತನು ಅಲ್ಲಿಯ ವರೆಗೆ ಉಪದೇಶಮಾಡಲು ಅನರ್ಹನು. ||೨೦||

1) ನೂತನಸ್ಯಾತ್ರ 2) ನಸ್ಯಾದ್ ಇತಿ ಪಾಠಭೇದ:

ಗೃಹಸ್ಥಾಚಾರ್ಯ ಪದ ಯಾರಿಗೆ ?

ಗೃಹಸ್ಥಸ್ಯಾಪಿ ಶುದ್ಧಸ್ಯ ಜಿನವೇದೋಪಜೀವಿನಃ ।
ಗೃಹಸ್ಥಾಚಾರ್ಯತಾ ದೇಯಾ 1 ಸ ಚ ಪೂಜ್ಯೋಽ
ಖಿಲೈರ್ಜನೈಃ ॥೨೧॥

– ಯಾವನು ಗೃಹಸ್ಥನಾದಾಗ್ಯೂ ಕೂಡ ಕುಲ ಜಾತಿ ಮನೋವಾಕ್ಕಾಯಗಳಿಂದ ಶುದ್ಧನಾಗಿರುತ್ತಾನೆಯೋ ಮತ್ತು ಜಿನನು ಉಪದೇಶಿಸಿದ ವೇದ ಅಂದರೆ ಆಗಮ ಜ್ಞಾನದಿಂದಲೇ ಜೀವಿಸುತ್ತಾನೆಯೋ ಆತನಿಗೆ ಗೃಹಸ್ಥಾಚಾರ್ಯಪದವು ಕೊಡಲು ಯೋಗ್ಯವಾಗಿದೆ. ಅಂದರೆ ಯಾವ ಗೃಹಸ್ಥನು ಕುಲ ಜಾತಿಗಳಿಂದ ಶುದ್ಧನಾಗಿ ಮನಃಶುದ್ಧಿ ವಾಕ್‌ಶುದ್ಧಿ ಕಾಯಶುದ್ಧಿಯುಳ್ಳವನಾಗಿ ಜಿನೇಂದ್ರನ ಆಗಮದಲ್ಲಿ ದೃಢವಿಶ್ವಾಸವುಳ್ಳವನಾಗಿರುತ್ತಾನೆಯೋ, ಅಸಿ ಮಷಿ ಕೃಷಿ ಮೊದಲಾದ ಉಪಜೀವಿಕೆಯನ್ನು ಬಿಟ್ಟಿರುತ್ತಾನೆಯೋ ಅಂಥ ಗೃಹಸ್ಥನಿಗೆ ಗೃಹಸ್ಥಾಚಾರ್ಯಪದವನ್ನು ಕೊಡಬೇಕು. ಆತನು ಎಲ್ಲರಿಂದಲೂ ಪೂಜ್ಯನು ಇದ್ದಾನೆ. ॥೨೧॥

ಪ್ರತಿಷ್ಠಾದಿಕಾರ್ಯಕ್ಕೆ ಅಧಿಕಾರಿ

ತದುಕ್ತೇ ಧರ್ಮಶಾಸ್ತ್ರೇ 2 ಸ್ಯಾಲ್ಲೋಕಾನಾಮಿಷ್ಟಸಂಗ್ರಹಃ ।
ಪ್ರತಿಷ್ಠಾದಿಷು ಕಾರ್ಯೇಷು ನೂನಂ ತಸ್ಯಾಧಿಕಾರಿತಾ ॥೨೨॥

ಅರ್ಥ– ಮೇಲೆ ಹೇಳಿದ ಜಿನೇಂದ್ರಾಗಮದಲ್ಲಿ ನಿಪುಣನಾದ ಗೃಹಸ್ಥಾಚಾರ್ಯನಿಂದ ಹೇಳಲ್ಪಟ್ಟ ಧರ್ಮಶಾಸ್ತ್ರದಲ್ಲಿ ಅಂದರೆ ಸಂಹಿತಾ ಶಾಸ್ತ್ರದಲ್ಲಿ ಜನಗಳಿಗೆ ಇಷ್ಟಸಂಗ್ರಹ ಅಂದರೆ ನಿತ್ಯ ನೈಮಿತ್ತಿಕ ಕ್ರಿಯೆಗಳ ಸಂಗ್ರಹವು ಆಗುತ್ತದೆ. ಜಿನಬಿಂಬ ಪ್ರತಿಷ್ಠಾದಿ ಕಾರ್ಯಗಳಲ್ಲಿ ನಿಶ್ಚಯವಾಗಿ ಆ ಗೃಹಸ್ಥಾಚಾರ್ಯನಿಗೆ ಅಧಿಕಾರತ್ವವು ಇದೆ. ಪ್ರತಿಷ್ಠಾತಿಲಕದಲ್ಲಿ ಬ್ರಹ್ಮಚಾರಿ ಮುಂತಾದವರು ಪ್ರತಿಷ್ಠೆ ಮಾಡಬಹುದೆಂದು ಹೇಳಿದ್ದಾರೆ. ಆದರೂ ಜನ್ಮಾಭಿಷೇಕ ಕಲ್ಯಾಣ ಮೊದಲಾದ ಕೆಲವು ಸ್ಥಳದಲ್ಲಿ ಶಚೀದೇವಿಯ ಭಾವನೆಯಿಂದ

1) ಜ್ಞೇಯಾ 2) ತದುಕ್ತೈರ್ಧರ್ಮಶಾಸ್ತ್ರೈಃ ಇತಿ ಪಾಠಭೇದಃ ।

ಆತನ ಹೆಂಡತಿಯೂ ಸಹ ಬರಬೇಕಾಗುವುದರಿಂದ ಪ್ರತಿಷ್ಠಾಕಾರ್ಯಕ್ಕೆ ಗೃಹಸ್ಥನೇ ಮುಖ್ಯನೆಂದು ಭಾವವು. ||೨೨||

ಮುನಿಯು ಯಾರೊಡನೆ ನಮಸ್ಕಾರಾದಿಗಳನ್ನು ಮಾಡಬಾರದು?

ಸಾಕಂ ವಿಸಂಘೈರ್ನ ಯತೇರ್ಭುಕ್ತಿ ಪಙ್ಕ್ತಿರ್ನತಾಸತಿಃ |
ಪರಸ್ಪರಂ ಚತುಸ್ಸಂಘ್ಯಾಂ ಪಙ್ಕ್ತಿಭೇದೋ ನ ವಿದ್ಯತೇ ||೨೩||

ಅರ್ಥ- ದ್ರಾವಿಡ ಶ್ವೇತಾಂಬರಾದಿ ಜೈನಾಭಾಸಗಳೆಂದು ಹೇಳಲ್ಪಟ್ಟ ವಿರುದ್ಧ ಸಂಘಗಳೊಡನೆ ಯತಿಗೆ ಭೋಜನದಲ್ಲಿ ಪಂಕ್ತಿಯು ಅಂದರೆ ಸಹ ಭೋಜನವು ಮತ್ತು ನಮಸ್ಕಾರ ಮಾಡಿದವನಿಗೆ ಪ್ರತಿನಮಸ್ಕಾರವೂ ಇಲ್ಲ. ಅಂದರೆ ಯತಿಯು ಮೂಲ ಸಂಘದ ಯತಿಗಳ ಹೊರತಾಗಿ ಜೈನಾಭಾಸ ಸಂಘಗಳೊಡನೆ ಪಂಕ್ತಿಭೋಜನ, ನಮಸ್ಕಾರ ಮೊದಲಾದ ಕ್ರಿಯೆಗಳನ್ನು ಮಾಡಬಾರದು. ಸಿಂಹಸಂಘ, ನಂದಿಸಂಘ, ಸೇನಸಂಘ, ದೇವಸಂಘ ಎಂಬ ನಾಲ್ಕು ಸಂಘಗಳಲ್ಲಿ ಪರಸ್ಪರವಾಗಿ ಭೋಜನಾದಿ ಕ್ರಿಯೆಗಳಲ್ಲಿ ಪಂಕ್ತಿಭೇಧವಿರುವುದಿಲ್ಲ. ಈ ನಾಲ್ಕು ಸಂಘದ ಯತಿಗಳು ಪರಸ್ಪರ ಪಂಕ್ತಿಭೋಜನ ನಮಸ್ಕಾರ ಮಾಡಲು ಯೋಗ್ಯರಿದ್ದಾರೆ, ದೋಷವಿಲ್ಲ. ||೨೩||

ವಿಸಂಘದಲ್ಲಿಯ ಶಿಷ್ಯರ ಸಂಗ್ರಹ ಮಾಡಬಹುದು

ಶ್ರಾವಕಂ ಶಿಷ್ಯಕಂ ಚಾಪಿ ಸಂಗೃಹ್ಣೀಯಾತ್ ಸಮಾಹಿತಃ |
ವಿಸಂಘ್ಯಾಂ ಶಿಷ್ಯಭಕ್ತಾನಾಂ ಗ್ರಹಣಂ ನೈವ ನಿಂದ್ಯತೇ ||೨೪||

ಅರ್ಥ- ಜೈನಾಭಾಸ ಸಂಘ ಸಮೂಹದಲ್ಲಿಯ ಶ್ರಾವಕನನ್ನೂ ಮತ್ತು ದೀಕ್ಷಾಸ್ವೀಕರಿಸುವ ಶಿಷ್ಯನನ್ನೂ ಸಹ ಸಾವಧಾನನಾಗಿ ಸಂಗ್ರಹಿಸ ಬೇಕು. ಇಂಥ ಜೈನಾಭಾಸ ಸಂಘದಲ್ಲಿಯ ಶಿಷ್ಯರ ಮತ್ತು ಭಕ್ತಿ ಮಾಡುವವರ ಸ್ವೀಕಾರವು ನಿಂದನೀಯವಾಗಲಾರದು. ಅಂದರೆ ಜೈನಾಭಾಸ ಸಂಘಗಳ ಅನುಯಾಯಿಗಳನ್ನು ತಮ್ಮವರನ್ನಾಗಿ ಮಾಡಿಕೊಂಡರ ದೋಷವಿಲ್ಲ. ||೨೪||

ಪರೀಕ್ಷಿಸಿ ದೀಕ್ಷೆಯನ್ನು ಕೊಡಬೇಕು

ಪರೀಕ್ಷ್ಯ ದೀಕ್ಷಾ ದಾತವ್ಯಾ ಮಿಥ್ಯಾದೃಷ್ಟೇರಥಾನ್ಯಥಾ ।
ದತ್ತಾ ದರ್ಶನಹಾಸ್ಯಾಯ ಸ್ವೋಪಘಾತಾಯ ಜಾಯತೇ1 ॥೨೫॥

ಅರ್ಥ- ಐದು ಪ್ರಕಾರದ ಮಿಥ್ಯಾ ದೃಷ್ಟಿ ಪುರುಷನ ಪರೀಕ್ಷೆಯನ್ನು ಚನ್ನಾಗಿ ಮಾಡಿ ದೀಕ್ಷಕಾಚಾರ್ಯರನು ಜೈನೇಂದ್ರ ದೀಕ್ಷೆಯನ್ನು ಕೊಡತಕ್ಕದ್ದು. ಅನ್ಯಥಾ ಅಂದರೆ ಪರೀಕ್ಷೆಯಿಲ್ಲದೆ ಕೊಡಲ್ಪಟ್ಟ ದೀಕ್ಷೆಯು ತರುವಾಯ ದರ್ಶನ ಅಂದರೆ ಸಿದ್ಧಾಂತದ ಹಾಸ್ಯಕ್ಕೂ ಮತ್ತು ದೀಕ್ಷೆಕೊಡುವರ ಮತ್ತು ತೆಗೆದುಕೊಳ್ಳುವವರ ಘಾತಕ್ಕೂ ಕಾರಣವಾಗುತ್ತದೆ. ॥೨೫॥

ಯತಿಗಳು ಎಲ್ಲಿ ಮಲಗಬಾರದು ?

ಶ್ರಮಣಃ ಶ್ರಾವಕಾದೀನಾಂ ನಿವಾಸೇಽಪಿ ನ ಸ್ವಪೇತ್ ।
ಚಿತ್ರಸ್ಥಾಪಿತಯೋಷಾಪಿ ಚಿತ್ತವಿಭ್ರಮಕಾರಿಣೀ 2 ॥೨೬॥

ಅರ್ಥ- ಶ್ರಮಣನು ಶ್ರಾವಕ ಶ್ರಾವಿಕಾ ಮೊದಲಾದವರ ಮನೆಯಲ್ಲಿ ರಾತ್ರಿಯಲ್ಲಿ ಮಲಗಬಾರದು. ಚಿತ್ರದಲ್ಲಿ ಬರೆಯಲ್ಪಟ್ಟ ಹೆಂಗಸೂ ಸಹ ಮನಸ್ಸಿನಲ್ಲಿ ಭ್ರಾಂತಿಯನ್ನುಂಟು ಮಾಡುವಳು. ಎಲ್ಲಿ ಮನಸ್ಸಿನಲ್ಲಿ ವಿಕಾರ ಹುಟ್ಟುವ ಸಂಭವವಿದೆಯೋ ಆ ಸ್ಥಾನಗಳಲ್ಲಿ ಮುನಿಯು ಇರಬಾರದು ಮತ್ತು ಮಲಗಬಾರದು. ಶ್ರಾವಕರಿರುವ ಮನೆಯಲ್ಲಿ ಹೆಂಗಸರೂ ಸಹ ಇರುವುದರಿಂದ ಅಲ್ಲಿ ರಾತ್ರಿಯಲ್ಲಿ ಮಲಗಬಾರದೆಂದು ಹೇಳಲಾಗಿದೆ. ಇದು ಮುನಿವ್ರತಗಳಲ್ಲಿ ಬಾಧೆಗೆ ಕಾರಣವಾಗಿದೆ. ॥೨೬॥

ಮುನಿಯು ಆರ್ಯಿಕೆಯರೊಡನೆ ಪ್ರಯಾಣಮಾಡಬಾರದು

ನಾರ್ಯಿಕಾಭಿಸ್ಸಮಂ ಮಾರ್ಗೇ ಗಂತವ್ಯಂ ಯತಿಸತ್ತಮೈಃ ।
ತತ್ಸಂಗಮಾತ್ ಪುರಾಭೂವನ್: ಯತಯೋ ದುಃಖಭಾಜನಮ್ ॥೨೭॥

---

1) ಚ ಕ್ರಮಾತ್, 2) ಚಿತ್ತವಿಭ್ರಮಕಾರಣಂ. ಇತಿ ಪಾಠಭೇದಃ ।

ಅರ್ಥ- ಮುನಿಶ್ರೇಷ್ಠರು ದಾರಿಯಲ್ಲಿ ಅರ್ಯಿಕೆಯರೊಡನೆ ಪ್ರಯಾಣ ಮಾಡಬಾರದು. ಏಕೆಂದರೆ ಪ್ರಾಚೀನ ಕಾಲದಲ್ಲಿ ಆ ಆರ್ಯಿಕೆಯರ ಸಹವಾಸ ದಿಂದ ಮುನಿಗಳು ದುಃಖಕ್ಕೆ ಪಾತ್ರರಾದರು. ಅಂದರೆ ತಮ್ಮ ಚಾರಿತ್ರದಿಂದ ಭ್ರಷ್ಟರಾಗಿ ಅನೇಕ ದುಃಖಗಳನ್ನು ಭೋಗಿಸಿದರು. ||೨೭||

ಒಬ್ಬೊಂಟಿಗ ಮುನಿಯು ಒಬ್ಬ ಹೆಂಗಸಿನೊಡನೆ ಮಾತಾಡಬಾರದು.

ಏಕಯಾ ಯೋಷಿತಾ ಸಾರ್ದ್ಧಂ ಸ್ವಯಮೇಕಾಕಿನಾಮುನಾ ।
ನ ಗೋಷ್ಠೀ ಕ್ರಿಯತೇ ನೈವ ಭುಜ್ಯತೇ ನಾಸ್ಯತೇಽಪಿ ವಾ ॥೨೮॥

ಅರ್ಥ- ತಾನು ಒಬ್ಬನೇ ಆದ ಈ ಮುನಿಯಿಂದ ಒಬ್ಬಳೇ ಆದ ಹೆಂಗಸಿ ನೊಡನೆ ಮಾತುಕತೆ ಮಾಡಲ್ಪಡುವುದಿಲ್ಲ. ಮತ್ತು ಭೋಜನವೂ ಮಾಡಲಾಗು ವುದಿಲ್ಲ. ಅಂದರೆ ಏಕಾಕಿಯಾದ ಯತಿಯು ಒಬ್ಬ ಹೆಂಗಸಿನೊಡನೆ ಮಾತಾಡ ಬಾರದು, ಭೋಜನಮಾಡಬಾರದು ಮತ್ತು ಕೂಡ್ರಬಾರದು.||೨೮||

ಚಾರಿತ್ರವನ್ನು ರಕ್ಷಿಸುವ ಉಪದೇಶ

ಯತ್ರ ಯತ್ರೇಂದ್ರಿಯಕ್ಷೋಭೋ ಜಾಯತೇ ವ್ರತಿನಃ 1 ।
ಪರಮ್ ।
ತಂ ತಂ ದೇಶಂ ಪರಿತ್ಯಜ್ಯ ಚಾರಿತ್ರಂ ಪರಿರಕ್ಷಯೇತ್ 2 ॥೨೯॥

ಅರ್ಥ- ಯಾವ ಯಾವ ಪ್ರದೇಶದಲ್ಲಿ ವ್ರತಿಗೆ ಪಂಚೇಂದ್ರಿಯಗಳ ಕ್ಷೋಭ ಅಂದರೆ ವಿಕಾರವು ಹುಟ್ಟುತ್ತಿದೆಯೋ ಅಯಾ ದೇಶವನ್ನು ತ್ಯಾಗ ಮಾಡಿ ಅತಿಶಯವಾಗಿ ಚಾರಿತ್ರವನ್ನು ಮುನಿಯು ರಕ್ಷಿಸಬೇಕು. ಅಂದರೆ ಚಾರಿತ್ರವು ಮೋಕ್ಷಕ್ಕೆ ಕಾರಣವಾಗಿರುವುದರಿಂದ ಅವಶ್ಯ ನಿರ್ದೋಷವಾಗಿ ಅದನ್ನು ಪಾಲಿಸಬೇಕು ಎಂದು ಭಾವವು ||೨೯||

ಷಡಾವಶ್ಯಕಗಳನ್ನು ಅವಶ್ಯಪಾಲಿಸಬೇಕು.

ಆವಶ್ಯಕಮತಿಕ್ರಮ್ಯ ನ ಕುರ್ಯಾದಪರಾಂ ಕ್ರಿಯಾಮ್ ।
ಗೀತವಾದ್ಯಾದಿಕಂ ನೈವ ಶೃಣುಯಾದಾಗ್ರಚೇತಸಾ ॥೩೦॥

1) ಯತಿನಃ । 2) ರಕ್ಷಯೇನ್ಮುನಿಃ । ಇತಿ ಪಾಠಭೇದಃ

ಅರ್ಥ– ಸಾಮಾಯಿಕ, ಜಿನಸ್ತವ, ನಮಸ್ಕಾರ, ಪ್ರತಿಕ್ರಮಣ, ಪ್ರತ್ಯಾಖ್ಯಾನ. ಕಾಯೋತ್ಸರ್ಗಗಳೆಂಬ ಆರು ಆವಶ್ಯಕ ಕ್ರಿಯೆಗಳ ಅತಿಕ್ರಮಣ ಮಾಡಿ ಬೇರೆ ಕ್ರಿಯೆಯನ್ನು ಅಂದರೆ ಪಾಪ ಜನಕ ಕ್ರಿಯೆಗಳನ್ನು ಮುನಿಗಳು ಮಾಡಬಾರದು. ಮತ್ತು ಗೀತ, ವಾದ್ಯ ಮೊದಲಾದದ್ದನ್ನು ಅನುರಾಗ ಚಿತ್ತದಿಂದ ಅಂದರೆ ಆಸಕ್ತಿಯಿಂದ ಕೇಳಬಾರದು. ||೨೦||

ಯೇನ ಯೇನ ಹಿ ಶಾಸ್ತ್ರೇಣ ಯಯಯಾ ವಾ ವಿದ್ಯಯಾ ಮುನೇಃ।
ಸಮ್ಯಕ್ತ್ವಸಂಯಮಾದೀನಾಂ ಹಾನಿಸ್ತತ್ಸೇವನಂ
ತ್ಯಜೇತ್ ||೨೧||

ಅರ್ಥ– ಯಾವ ಯಾವ ಶಾಸ್ತ್ರದಿಂದಲೂ ಅಥವಾ ಯಾವ ವಿದ್ಯೆಯಿಂದಲೂ ಮುನಿಯ ಸಮ್ಯಕ್ತ್ವ, ಸಂಯಮ ಮೊದಲಾದುವುಗಳ ಹಾನಿಯಾಗುತ್ತದೆಯೋ ಅಂಥ ಶಾಸ್ತ್ರಪಠನ ಅಥವಾ ವಿದ್ಯಾರಾಧನೆಯನ್ನು ಮುನಿಯು ತ್ಯಾಗ ಮಾಡಬೇಕು. ಅಂದರೆ ಸಮ್ಯಕ್ತ್ವ ಸಂಯಮಗಳ ಘಾತಕ ಶಾಸ್ತ್ರ, ಮಂತ್ರತಂತ್ರಾದಿ ವಿದ್ಯೆಗಳನ್ನು ಆರಾಧಿಸಬಾರದು ||೨೧||

ಯಾರ ಮುಂದೆ ಸಿದ್ಧಾಂತಾಚಾರ ಪುಸ್ತಕವನ್ನು ಓದಬಾರದು ?

ಆರ್ಯಿಕಾಣಾಂ ಗೃಹಸ್ಥಾನಾಂ ಶಿಷ್ಯಾಣಾಮಲ್ಪಮೇಧಸಾಮ್ ।
ನ ವಾಚನೀಯಂ ಪುರತಃ ಸಿದ್ಧಾಂತಾಚಾರಪುಸ್ತಕಮ್ ||೨೨||

ಅರ್ಥ– ಆರ್ಯಿಕೆಯರ, ಗೃಹಸ್ಥರ ಮತ್ತು ಅಲ್ಪಬುದ್ಧಿಯುಳ್ಳ ಶಿಷ್ಯರ ಮುಂದೆ (ಸಿದ್ಧಾಂತಾಚಾರ ಶಾಸ್ತ್ರದಲ್ಲಿ ನಿಷ್ಣಾತನಾದ ಮುನಿಯು) ಸಿದ್ಧಾಂತಾಚಾರ ಪುಸ್ತಕವನ್ನು ಓದಬಾರದು. ||೨೨||

ಆರ್ಯಿಕೆಯರು ಯಾವುದಕ್ಕೆ ಅನರ್ಹರು ?

ನಾಚಾರವಾಚನಾದೀನಾಂ ಯೋಗ್ಯಾಃ ಸ್ಯುಃ ಶ್ರಮಣೀಜನಾಃ1 ।
ವಂದನಾಂ ಪ್ರತಿ ನೈವ ಸ್ಯಾದ್ವಂದನಾ ಚ ಕದಾಚನ ||೨೩||

1) ಶ್ರಮಣಾಃ ಪರಂ।

ಅರ್ಥ- ಶ್ರಮಣೀಜನರು-ಆರ್ಯಿಕೆಯರು ಆಚಾರವಾಚನಾ ಮೊದಲಾದವುಗಳಿಗೆ ಯೋಗ್ಯರಾಗಲಾರರು. ಮತ್ತು ಮುನಿಯು ಆರ್ಯಿಕೆಯರ ವಂದನೆಗೆ ಪ್ರತಿ ವಂದನೆಯನ್ನು ಮಾಡಬಾರದು. ॥೩೩॥

ಮಹತ್ತರಾಪ್ಯಾರ್ಯಿಕಾ ವೈ ವಂದತೇ ಭಕ್ತಿಭಾವಿತಾ ।
ಅದ್ಯ ದೀಕ್ಷಿತಮಪ್ಯಾಶು ಯತಿನಂ ಶಾಂತಮಾನಸಮ್ ॥೩೪॥

ಅರ್ಥ- ಆರ್ಯಿಕೆಯು ಅತ್ಯಂತ ದೊಡ್ಡವಳಾದಾಗ್ಯೂ ಅಂದರೆ ಬಹಳ ದಿನಗಳಿಂದ ದೀಕ್ಷಿತಳಾದಾಗ್ಯೂ ಇಂದೇ ದೀಕ್ಷಿತನಾದ ಸಮಾಧಾನ ಚಿತ್ತವುಳ್ಳ ಯತಿಯನ್ನು ಬೇಗನೆ ಭಕ್ತಿಭಾವಿತಳಾಗಿ ವಂದಿಸುತ್ತಾಳೆ. ಅಂದರೆ ಹೊಸದಾಗಿ ದೀಕ್ಷಿತನಾದ ಮುನಿಗೆ ಬಹುಕಾಲದಿಂದ ದೀಕ್ಷಿತಳಾದ ದೊಡ್ಡ ಆರ್ಯಿಕೆಯು ನಮಸ್ಕರಿಸಬೇಕು. ॥೩೪॥

ಮುನಿಯು ಆಶೀರ್ವಾದ ಮಾಡುವ ವಿಧಿ

ಕರ್ಮಕ್ಷಯಃ ಸಮಾಧ್ಯಾದಿಃ ಕ್ಷುಲ್ಲಕಾನಾಂ ನತಾತ್ಮನಾಮ್ ।
ಸದ್ಧರ್ಮವೃದ್ಧಿರ್ಗೃಹಿಣೋ ವ್ರತಿನಃ ಶುದ್ಧಚೇತಸಃ ॥೩೫॥

ಅರ್ಥ- ನಮಸ್ಕರಿಸಿದಂಥ ಕ್ಷುಲ್ಲಕರಿಗೆ 'ಕರ್ಮಕ್ಷಯಃ ಅಸ್ತು' 'ಸಮಾಧಿರಸ್ತು' ಎಂತಲೂ, ಪರಿಶುದ್ಧವಾದ ಮನಸ್ಸುಳ್ಳ ವ್ರತಿಯಾದ ಗೃಹಸ್ಥನಿಗೆ 'ಸದ್ಧರ್ಮವೃದ್ಧಿರಸ್ತು' ಎಂದು ಯತಿಯು ಆಶೀರ್ವದಿಸಬೇಕು. ಅಂದರೆ ಕರ್ಮಗಳ ಕ್ಷಯವಾಗಲಿ, ಸಮಾಧಿಯು ಆಗಲಿ ಎಂದು ಕ್ಷುಲ್ಲಕರಿಗೂ, ವ್ರತಧಾರಿ ಗೃಹಸ್ಥನಿಗೆ ಸಮೀಚೀನ ಧರ್ಮವು ವೃದ್ಧಿಯಾಗಲೆಂದೂ ಮುನಿಯು ಆಶೀರ್ವಾದ ಕೊಡಬೇಕು. ॥೩೫॥

ಮಿಥ್ಯಾದೃಷ್ಟಿ ಜನರಿಗೆ ಆಶೀರ್ವದಿಸುವ ವಿಧಿ

ಮಿಥ್ಯಾದೃಷ್ಟೇಃ ಸುವರ್ಣಸ್ಯ ಧರ್ಮವೃದ್ಧಿರುದಾಹೃತಾ ।
ಕಿರಾತಮ್ಲೇಚ್ಛಕಾನ್ ಧರ್ಮಲಾಭೇನ ಪರಿತೋಷಯೇತ್ ॥೩೬॥

ಅರ್ಥ– ಉತ್ತಮ ವರ್ಣದವನಾದ ಬ್ರಾಹ್ಮಣ ಅಥವಾ ಕ್ಷತ್ರಿಯ, ವೈಶ್ಯ ಮಿಥ್ಯಾದೃಷ್ಟಿಗೆ 'ಧರ್ಮವೃದ್ಧಿರಸ್ತು' ಎಂದರೆ ಧರ್ಮವು ವೃದ್ಧಿಯಾಗಲೆಂದು ಆಶೀರ್ವಾದವು ಹೇಳಲಾಗಿದೆ. ಮತ್ತು ಬೇಡರು ಮ್ಲೇಚ್ಛ-ತುರುಕರು ಮೊದಲಾದವರನ್ನು 'ಧರ್ಮಲಾಭದಿಂದ ಸಂತೋಷಗೊಳಿಸಬೇಕು. ಅಂದರೆ ಅವರಿಗೆ ಧರ್ಮಲಾಭವಾಗಲೆಂದು ಹರಸಬೇಕು. ॥೩೬॥

ಸಮ್ಯಗ್ದೃಷ್ಟಿ ಮಾದಿಗನು ನಮಸ್ಕರಿಸಿದರೆ

ಸಮ್ಯಗ್ದರ್ಶನಶುದ್ಧಸ್ಯ ಮಾತಂಗಸ್ಯ ವದೇನ್ಮುನಿಃ ।
ಪಾಪಕ್ಷಯ ಇತಿ ಸ್ಪಷ್ಟಂ ನ ತಸ್ಯಾನ್ಯಪರೋ ವಿಧಿಃ ॥೩೭॥

ಅರ್ಥ– ಸಮ್ಯಗ್ದರ್ಶನದಿಂದ ಶುದ್ಧನಾದ ಮಾದಿಗನಿಗೆ ಮುನಿಯು 'ಪಾಪಕ್ಷಯೋಽಸ್ತು' ಎಂದು ವ್ಯಕ್ತವಾಗಿ ಆಶೀರ್ವದಿಸಬೇಕು. ಆತನಿಗೆ ಮತ್ತೊಂದು ವಿಧಿಯು ಇಲ್ಲ. ಅಂದರೆ ಜೀವಾದಿಸಪ್ತತತ್ತ್ವಗಳಲ್ಲಿ ದೃಢವಾದ ನಂಬಿಕೆಯುಳ್ಳ ಮಾತಂಗನು ಮುನಿಗಳಿಗೆ ನಮೋಸ್ತು ಮಾಡಿದಾಗ ಪಾಪದ ಕ್ಷಯವಾಗಲಿ ಎಂದು ಹರಸಬೇಕು ॥೩೭॥

ಯತಿಯು ಯಾರ ಮನೆಯಲ್ಲಿ ಭೋಜನಮಾಡಬಾರದು ?

ಗಾಯಕಸ್ಯ ತಳಾರಸ್ಯ ನೀಚಕರ್ಮೋಪಜೀವಿನಃ ।
ಮಾಲಿಕಸ್ಯ ವಿಲಿಂಗಸ್ಯ 1 ವೇಶ್ಯಾಯಾಸ್ತೈಲಿಕಸ್ಯ ಚ ॥೩೮॥
ದೀನಸ್ಯ ಸೂತಿಕಾಯಾಶ್ಚ ಛಿಂಪಕಸ್ಯ ವಿಶೇಷತಃ 2 ।
ಮದ್ಯವಿಕ್ರಯಿಣೋ ಮದ್ಯಪಾಯಿಸಂಸರ್ಗಿಣಶ್ಚ ನ ॥೩೯॥
ಕ್ರಿಯತೇ ಭೋಜನಂ ಗೇಹೇ ಯತಿನಾ ಮೋಕ್ತುಮಿಚ್ಛುನಾ ।
ಏವಮಾದಿಕಮನ್ಯಚ್ಚ ಚಿಂತನೀಯಂ ಸ್ವಚೇತಸಾ ॥೪೦॥

ಅರ್ಥ– ಗಾಯನದಿಂದ ಉಪಜೀವಿಸುವವನ, ತಳವಾರನ, ನಿಂದನೀಯವಾದ ನೀಚಕರ್ಮದಿಂದ ಉಪಜೀವಿಸುವವನ, ಹೂವಾಡಿಗನ, ಜೈನನ

1) ವಿಲಿಂಪಸ್ಯ, 2) ವಿಲಿಂಗಿನಃ ।

ಅಂದರೆ ಬಾಹ್ಯ ಚಿಹ್ನೆಯಾದ ಯಜ್ಞೋಪವೀತ, ಮಾನಸ್ತಂಭಾದಿ ರೂಪದಿಂದ ಗಂಧಲೇಪನವಿಲ್ಲದವನ, ಅಥವಾ ವಿಲಿಂಪಸ್ಯ ಹೀಗೆ ಪಾಠಾಂತರದ ಅಪೇಕ್ಷೆಯಿಂದ ಅಂದರೆ ಚತುರ್ಣಿಕಾಯ ದೇವ ದೇವಿಯರ, ಸೂಳೆಯ, ಗಾಣಿಗನ ಕೆಲಸಮಾಡುವವನ ದೀನನ ಅಂದರೆ ಯಾವಾಗಲೂ ಆರ್ತಧ್ಯಾನದಲ್ಲಿರುವವನ, ಮಗುವನ್ನು ಹೆತ್ತು ಸ್ವಲ್ಪ ದಿನವಾದವಳ, ಬಟ್ಟೆ ಹೊಲಿಯುವವನ ಅಂದರೆ ದರ್ಜಿಯ, ವಿಶೇಷವಾಗಿ ಹೆಂಡ ಸರಾಯಿ ಮೊದಲಾದ ಮಾದಕ ಪದಾರ್ಥಗಳ ಮಾರಾಟಗಾರನ ಮತ್ತು ಹೆಂಡ ಗುಡುಕರ ಸಹವಾಸ ಮಾಡುವವನ ಮನೆಯಲ್ಲಿ ಮೋಕ್ಷಾಭಿಲಾಷಿಯಾದ ಮುನಿಯಿಂದ ಭೋಜನವು ಮಾಡಲ್ಪಡುವುದಿಲ್ಲ. ಅಂದರೆ ಇಂಥವರ ಮನೆಯಲ್ಲಿ ನಿರ್ಗ್ರಂಥಮುನಿಯು ಆಹಾರವನ್ನು ಸ್ವೀಕರಿಸಬಾರದು. ಇದಲ್ಲದೆ ಈ ಪ್ರಕಾರದ ಬೇರೆಯದನ್ನೂ ಸಹ ತನ್ನ ಮನಸ್ಸಿನಿಂದ ವಿಚಿಂತಿಸಬೇಕು. ಅಂದರೆ ಮೇಲೆ ಹೇಳಿದವರಂತೆ ಇರುವ ಬೇರೆಯವರಲ್ಲಿಯೂ ಹೀನಕಾರ್ಯಗಳನ್ನು ಮಾಡುವವರ ಮನೆಯಲ್ಲಿಯೂ ಭೋಜನ ಮಾಡಬಾರದು ॥೩೮|೩೯|೪೦॥

ಇನ್ನೂ ಯಾರ ಮನೆಯಲ್ಲಿ ಭೋಜನ ಮಾಡಬಾರದು

ವರಃ 1 ಸ್ವಹಸ್ತೇನ ಕೃತಃ ಪಾಕೋ ನಾನ್ಯತ್ರ ದುರ್ದೃಶಾಮ್ ।
ಮಂದಿರೇ ಭೋಜನಂ ಯಸ್ಮಾತ್ಸರ್ವಸಾವದ್ಯಸಂಗಮಃ ॥೪೧॥

ಅರ್ಥ– ತನ್ನ ಹಸ್ತದಿಂದ ಮಾಡಲ್ಪಟ್ಟ ಅಡಿಗೆಯು ಶ್ರೇಷ್ಠವಾದದ್ದಾಗಿದೆ. ಆದರೆ ಬೇರೆ ಕಡೆಯಲ್ಲಿ (ಜೈನರ ಹೊರತಾಗಿ) ಮಿಥ್ಯಾದೃಷ್ಟಿಗಳ ಮನೆಯಲ್ಲಿ ಭೋಜನವು ಒಳ್ಳೆಯದಲ್ಲ. ಏಕೆಂದರೆ ಮಿಥ್ಯಾದೃಷ್ಟಿಗಳ ಮನೆಯಲ್ಲಿ ಭೋಜನ ಮಾಡುವುದರಿಂದ ಎಲ್ಲ ಪಾಪಗಳ ಸಂಗಮವಾಗುತ್ತದೆ. ಅಂದರೆ ಮುನಿಯು ತನ್ನ ಕೈಯಿಂದ ಅನ್ನ ಬೇಯಿಸಬೇಕೆಂದು ಯಾರೂ ತಿಳಿದುಕೊಳ್ಳಬಾರದು. ಮುನಿಗಳು ಮಿಥ್ಯಾದೃಷ್ಟಿಗಳ ಮನೆಯಲ್ಲಿ ಯಾವತರದಿಂದಲೂ ಆಹಾರಮಾಡಬಾರದು ಎಂದು ಅಭಿಪ್ರಾಯವಿದೆ. ॥೪೧॥

1) ವರಂ ।

ದುಃಖಿತರಾದವರನ್ನು ಅನುಗ್ರಹಿಸಬೇಕು.

ಮಧ್ಯಾಹ್ನೇ ದುಃಖಿತಾನ್ ದೀನಾನ್ ಭೋಜನಾದಿಭಿರಾದರಾತ್।

ಅನುಗೃಹ್ಣನ್ ಯತಿಃ ಸಂಘೈಃ ಪೂಜನೀಯೋ ಭವೇತ್ಸದಾ

॥೪೨॥

ಅರ್ಥ– ಮಧ್ಯಾಹ್ನ ಕಾಲದಲ್ಲಿ ದುಃಖಿತರಾದ (ಅನ್ನವಿಲ್ಲದೆ ಸಂಕಟ ಪಡುವ) ದೀನರನ್ನು ಭೋಜನ ವೊದಲಾದುವುಗಳಿಂದ ಆದರದಿಂದ ಅನುಗ್ರಹಿಸುವ ಯತಿಯು ಸಂಘಗಳಿಂದ ಸದಾ ಪೂಜನಿಯನಾಗುತ್ತಾನೆ. ಅಂದರೆ ಯಾರಾದರೂ ಅನ್ನವಿಲ್ಲದೆ ದುಃಖಪಡುತ್ತಿರುವುದು ಗೊತ್ತಾದರೆ ಶ್ರಾವಕರಿಗೆ ಹೇಳಿ ಅವರ ಸಂಕಟವನ್ನು ಮುನಿಯು ಪರಿಹರಿಸುತ್ತಾನೆ. ॥೪೨॥

ಮೃದುಪಿಂಛಿಯಿಂದ ಮೈ ಒರಿಸಿಕೊಳ್ಳುವ ಕ್ರಮ.

ಪಿಂಛೇನ ಮೃದುನಾಽಲಿಖ್ಯ ವಪುರ್ಘಮಾದ್ವಿಶೇನ್ಮುನಿಃ।

ಛಾಯಾಂ ತದ್ವೈವ ಘರ್ಮಂ ಚ ಭೂಮಿಭೇದೇಽಪಿ ಚಾನ್ವಹಮ್

॥೪೩॥

ಅರ್ಥ :– ಮುನಿಯು ಬಿಸುಲಿನಲ್ಲಿಂದ ನೆಳಲನ್ನೂ ಹಾಗೂ ನೆಳಲಿನಲ್ಲಿಂದ ಬಿಸುಲನ್ನೂ, ಮೃದುವಾದ ಪಿಂಛಿಯಿಂದ ತನ್ನ ಶರೀರವನ್ನು ಒರಿಸಿಕೊಂಡು ಯಾವಾಗಲೂ ಪ್ರವೇಶಮಾಡಬೇಕು. ಮತ್ತು ಭೂಮಿಭೇದದಲ್ಲಿಯೂ ಕೂಡ ಯಾವಾಗಲೂ ಪ್ರವೇಶ ಮಾಡುವಾಗ್ಗೆ ಮೈಯನ್ನು ಪಿಂಛಿಯಿಂದ ಒರಿಸಿಕೊಳ್ಳಬೇಕು. ಅಂದರೆ ಕರಿಭೂಮಿ, ಕೆಂಪುಭೂಮಿ, ಬಿಳಿಭೂಮಿಗಳು ಪ್ರಾಪ್ತವಾದಾಗ ಆಯಾ ಭೂಮಿಯನ್ನು ಪ್ರವೇಶಿಸುವಾಗ ತನ್ನ ಶರೀರವನ್ನು ಪಿಂಛಿಯಿಂದ ಒರಿಸಿಕೊಳ್ಳಬೇಕು. ॥೪೩॥

ಯತಿಯು ಭಿಕ್ಷೆಗೆ ಎಲ್ಲಿ ಹೋಗಬಾರದು ?

ಗೃಹರೋಧೇ ಪಶೂನಾಂ ಚ ಬಂಧನೇ ಧಾನ್ಯಶೋಷಣೇ ೧ ।
ಸಾವದ್ಯಕರ್ಮಣ್ಯಸ್ಮಿನ್ವೈ ವರ್ತಮಾನೇ ಚ ಮಂದಿರೇ ॥೪೪॥

ನ ವಿಶೇದ್ಭೋಜನಂ ಕರ್ತುಂ ಪ್ರವಿಶ್ಯ ಚ ತದಂಗಣೇ ।
ಮುಹುರ್ನ ವೀಕ್ಷಯೇದ್ದಾತೄನ್ ಸಪ್ತೋಚ್ಛ್ವಾಸೇಷು
ವೀಕ್ಷಯೇತ್ ೨ ॥೪೫॥

ಅರ್ಥ :- ಮನೆ ಮುಚ್ಚಿದಾಗಲೂ, ಪಶುಗಳ ಬಂಧನವಿರುವಾಗಲೂ, ಧಾನ್ಯ ಮುಂತಾದವುಗಳನ್ನು ಒಣಗಿಸುತ್ತಿರುವಾಗಲೂ. ಇಂಥ ಪಾಪ ಕರ್ಮವು ಮನೆಯಲ್ಲಿ ನಡೆಯುತ್ತಿರುವಾಗ ಈ ಸ್ಥಾನಗಳಲ್ಲಿ ಯತಿಯು ಭೋಜನ ಮಾಡುವುದಕ್ಕೋಸ್ಕರ ಪ್ರವೇಶ ಮಾಡಕೂಡದು. ಮತ್ತು ಆ ಮನೆಯ ಅಂಗಣದಲ್ಲಿ ಪ್ರವೇಶಮಾಡಿಯೂ ಬಾರಿಬಾರಿಗೂ ದಾತೃಗಳನ್ನು ನೋಡಬಾರದು. ಏಳು ಉಚ್ಛ್ವಾಸಗಳ ವರೆಗೆ ನೋಡಬೇಕು. ಇದರ ಅಭಿಪ್ರಾಯ ಹೀಗಿದೆ-ಮುನಿಯು ಚರ್ಯೆಗಾಗಿ ಹೊರಟಾಗ ದಾತಾ ಶ್ರಾವಕನ ಮನೆಯ ಅಂಗಣದಲ್ಲಿ ಅಥವಾ ಬಾಗಿಲ ಹತ್ತಿರ ದಾತೃವು ಮನೆಯಿಂದ ಹೊರಗೆ ಬಂದು ಬಾಗಿಲ ಬಳಿ ಬಲಗೊಳ್ಳುವುದರ ಪ್ರತೀಕ್ಷೆಯನ್ನು ಏಳು ಶ್ವಾಸೋಚ್ಛ್ವಾಸ ಸಮಯದ ಒರೆಗೆ ಮಾಡಬೇಕು. ಶ್ವಾಸೋಚ್ಛ್ವಾಸದ ಪ್ರಮಾಣವು ಹೀಗಿದೆ-'ಣಮೋ ಅರಿಹಂತಣಂ ಣಮೋ ಸಿದ್ಧಾಣಂ' ಇಷ್ಟು ಮಂತ್ರವನ್ನು ಉಚ್ಚಾರ ಮಾಡಲಿಕ್ಕೆ ಹತ್ತುವ ಸಮಯಕ್ಕೆ ಒಂದು ಶ್ವಾಸೋಚ್ಛ್ವಾಸವೆನ್ನುತ್ತಾರೆ, ಹೀಗೆ ಪೂರ್ಣ ಣಮೋಕಾರ ಮಂತ್ರವನ್ನು ಹೇಳಲಿಕ್ಕೆ ಮೂರು ಶ್ವಾಸೋಚ್ಛ್ವಾಸಗಳಾಗುತ್ತವೆ. ಈ ಕ್ರಮದಿಂದ ಏಳು ಶ್ವಾಸೋಚ್ಛ್ವಾಸಗಳ ವರೆಗೆ ಮುನಿಯು ಬಲಗೊಳ್ಳುವ ಶ್ರಾವಕನ ನಿರೀಕ್ಷಣ ಮಾಡಬೇಕು ಮುಂದೆ ಅಲ್ಲಿಂದ ಬೇರೆ ಕಡೆಗೆ ಹೊರಟುಹೋಗಬೇಕು. ॥೪೪-೪೫॥

ರೋಗಿಯನ್ನು ನೋಡಿ ಉಪೇಕ್ಷಿಸಬಾರದು

೧ ಬಂಧನೇऽತ್ರ ಪ್ರಶೋಷಣೇ ೨ ಸಪ್ತೋಚ್ಛ್ವಾಸೇ ತು ಸಮ್ಮತಃ !

ವ್ಯಾಧ್ಯಾರ್ತಂ ಯೋಗಿನಂ ದೃಷ್ಟ್ವಾ[೧] ನೋಪೇಕ್ಷೇತ ಕದಾಚನ।
ಸ್ವಕೀಯಂ ಪರಕೀಯಂ ವಾ ಮಿದರ್ಶನಮಥಾಪಿ ವಾ ॥೪೬॥

ಅರ್ಥ :- ಮುನಿಯು ರೋಗಪಿಡಿತನಾದ ತನ್ನ ಸಂಬಂದಿ ಅಥವಾ ಪರಸಂಬಂಧಿಯಾದ ಯೋಗಿಯನ್ನು ಎಂದೂ ಉಪೇಕ್ಷಿಸಬಾರದು. ಮತ್ತು ಮಿಥ್ಯಾದೃಷ್ಟಿಯಾದ ರೋಗಿಯನ್ನು ಕೂಡ ಉಪೇಕ್ಷಿಸಬಾರದು. ಅಂದರೆ ತಾನಿರುವ ಸಂಘದಲ್ಲಿಯು ಅಥವಾ ಬೇರೆ ಸಂಘದಲ್ಲಯು ರೋಗಪೀಡಿತನಾದ ಯತಿಯನ್ನು ಉಪೇಕ್ಷಿಸದೆ ಅವರ ವೈಯಾವೃತ್ಯ ಮಾಡಬೇಕು ಎಂದು ಭಾವವು. ॥೪೬॥

ಪಾತ್ರಾಪಾತ್ರ ವಿಚಾರ

ಜ್ಞಾನಚಾರಿತ್ರಹೀನೋಽಪಿ ಜೈನಃ ಪಾತ್ರಾಯತೇತರಾಂ ।
ಜ್ಞಾನಚಾರಿತ್ರಯುಕ್ತೋಽಪಿ ನ ಮಿಥ್ಯಾದೃಕ್ಕದಾಚನ ॥೪೭॥

ಅರ್ಥ :- ಜಿನೇಂದ್ರ ಭಕ್ತನು ಜ್ಞಾನ ಮತ್ತು ಚಾರಿತ್ರ ಇವುಗಳಿಂದ ಹೀನನಾದಾಗ್ಯೂ ಸಹ ಅತ್ಯಂತವಾಗಿ ಪಾತ್ರನಾಗುತ್ತಾನೆ. ಮಿಥ್ಯಾದೃಷ್ಟಿಯು ಜ್ಞಾನ ಚಾರಿತ್ರಗಳಿಂದ ಕೂಡಿಕೊಂಡಾಗ್ಯೂ ಕೂಡ ಎಂದೂ ಪಾತ್ರನಾಗ ಲಾರನು. ಅಂದರೆ ಸಪ್ತ ತತ್ತ್ವಗಳಲ್ಲಿ ಅಥವಾ ಜಿನೇಂದ್ರ ವಚನದಲ್ಲಿ ಶ್ರದ್ಧೆ ಯುಳ್ಳವನು ಜ್ಞಾನಚಾರಿತ್ರದಲ್ಲಿ ಹೀನನಾಗಿದ್ದರೂ ಪಾತ್ರನಾಗಬಲ್ಲನು. ಏಕೆಂದರೆ ಆತನು ಮೋಕ್ಷಮಾರ್ಗಸ್ಥನೆಂದು ಹೇಳಲ್ಪಡುತ್ತಾನೆ. ಮಿಥ್ಯಾ ದೃಷ್ಟಿ ಪುರುಷನು ಮೋಕ್ಷಮಾರ್ಗಸ್ಥನಾಗದಿದ್ದುದರಿಂದ ಪಾತ್ರನಾಗಲಾರನು. ॥೪೭॥

ದಾನ ಯಾರಿಗೆ ಕೊಡಬೇಕು

ತಸ್ಮೈ ದಾನಂ ಪ್ರದಾತವ್ಯಂ ಯಸ್ಸನ್ಮಾರ್ಗೇ ಪ್ರವರ್ತತೇ ।
ಪಾಷಂಡಿಭ್ಯೋ ದದದ್ದಾತಾ ದಾನಂ ಮಿಥ್ಯಾತ್ವಮಶ್ನುತೇ[೨] ॥೪೮॥

೧ ವೀಕ್ಷ್ಯ. ೨ ಪಾಷಂಡಿಭ್ಯೋ ದದದ್ದಾನಂ ದಾತಾ ಮಿಥ್ಯಾತ್ವವರ್ಧಕಃ।

ಅರ್ಥ :- ಯಾವನು ಸನ್ಮಾರ್ಗದಲ್ಲಿ—ಮೋಕ್ಷಮಾರ್ಗದಲ್ಲಿ ಪ್ರವೃತ್ತನಾಗಿರುತ್ತಾನೆಯೋ ಆತನಿಗೋಸ್ಕರ ದಾನವು ಕೊಡಲು ಯೋಗ್ಯವಾಗಿದೆ. ಮೋಕ್ಷಮಾರ್ಗದಲ್ಲಿ ಶ್ರದ್ಧೆಯಿಲ್ಲದ ಪಾಖಂಡಿಗಳಿಗೆ ದಾನವನ್ನು ಕೊಡುವ ದಾತೃವು ಮಿಥ್ಯಾತ್ವವನ್ನು-ನಾಸ್ತಿಕ ಭಾವವನ್ನು ಪಡೆಯುತ್ತಾನೆ. ಆದುದರಿಂದ ಪಾತ್ರ ಅಪಾತ್ರರ ವಿಚಾರಮಾಡಿ ದಾನ ಕೊಡಬೇಕು. ||೪೮||

ಜೀರ್ಣೋದ್ಧಾರವನ್ನು ಸಹ ಮಾಡಬೇಕು.

ಜೀರ್ಣಂ ಜಿನಗೃಹಂ ಬಿಂಬಂ ಪುಸ್ತಕಂ ಚ ಸುದರ್ಶನಮ್ ೧ ।
ಉದ್ಧಾರ್ಯ ಸ್ಥಾಪನಂ ಪೂರ್ವಪುಣ್ಯತೋ ಲಭ್ಯಮುಚ್ಯತೇ ೨ ||೪೯

ಅರ್ಥ :- ಜೀರ್ಣಗಳಾದ ಚೈತ್ಯಾಲಯ,ಜಿನ ಭಗವಂತನ ಪ್ರತಿಮೆ, ಪುಸ್ತಕ ಮತ್ತು ಸಮ್ಯಗ್ದರ್ಶನ ಇವುಗಳನ್ನೆಲ್ಲ ಉದ್ಧಾರಮಾಡಿ ಸ್ಥಾಪಿಸುವುದು ಪೂರ್ವಜನ್ಮದ ಪುಣ್ಯದಿಂದ ಪಡೆಯಲು ಯೋಗ್ಯವಾದದ್ದೆಂದು ಹೇಳಲ್ಪಡುತ್ತದೆ. ಬಸ್ತಿಯು ಜೀರ್ಣವಾಗಿದ್ದರೆ ಅದನ್ನು ಪುನರ್ನಿಮಾಣ ಮಾಡಿಸಬೇಕು. ಜಿನಬಿಂಬವು ಜೀರ್ಣವಾಗಿದ್ದರೆ ಅದನ್ನು ಹೊಸದಾಗಿ ತಯಾರಿಸಿ ಬಸ್ತಿಯಲ್ಲಿ ಸ್ಥಾಪಿಸಬೇಕು. ಶಾಸ್ತ್ರವು ಬಹಳ ಜೀರ್ಣವಾಗಿದ್ದರೆ ಅದನ್ನು ಬರೆಯಿಸಿ ಅಥವಾ ಮುದ್ರಣ ಮಾಡಿಸಿ ಪುನರುದ್ಧಾರಗೊಳಿಸಬೇಕು. ಯಾರಾದರೂ ಸಮ್ಯಗ್ದರ್ಶನದಿಂದ ಭ್ರಷ್ಟರಾಗುತ್ತಿದ್ದರೆ ಅವರನ್ನು ಧರ್ಮದಲ್ಲಿ ಮತ್ತೆ ಸ್ಥಿರಗೊಳಿಸಬೇಕು. ಇವೆಲ್ಲ ಪೂರ್ವ ಪುಣ್ಯದಿಂದಲೇ ಮನುಷ್ಯನಿಗೆ ಲಭ್ಯವಾಗುತ್ತವೆ. ||೪೯||

ಯತಿಗಳಿಗೆ ಯಾವಾಗ ನಮಸ್ಕರಿಸಬಾರದು ?

ಶಯಾನಂ ವ್ಯಗ್ರಮನಸಂ ಮಲೋಜ್ಝಂ ನಿಂದ್ಯಕರ್ಮಕಮ್ ।
ನ ವಂದತೇ ಯತಿಂ ಸಾಧುರ್ಧರ್ಮಧ್ಯಾನಪರಂ ನಮೇತ್ ||೫೦

ಅರ್ಥ :- ಮಲಗಿರುವ, ತ್ವರೆಯಾದ ಮನಸ್ಸುಳ್ಳಂಥ ಅಂದರೆ

೧ ಶ್ರಾದ್ಧಮೇವ ವಾ ೨ ಪುಣ್ಯತೋಽಧಿಕಮುಚ್ಯತೇ

ನಮಸ್ಕರಿಸುವ ಭಕ್ತನತ್ತ ನೋಡದಿರುವ, ಮಲಮೂತ್ರ ವಿಸರ್ಜನೆ ಮಾಡುತ್ತಿರುವ ಮತ್ತು ನಿಂದ್ಯವಾದ ಕಾರ್ಯ ಮಾಡುತ್ತಿರುವ ಯತಿಯನ್ನು ಸಾಧು-ಸತ್ಪುರುಷನು ವಂದಿಸುವುದಿಲ್ಲ, ಆದರೆ ಆಜ್ಞಾವಿಚಯ, ವಿಪಾಕವಿಚಯ, ಅಪಾಯ ವಿಚಯ ಮತ್ತು ಸಂಸ್ಥಾನ ವಿಚಯಗಳೆಂಬ ನಾಲ್ಕು ಧರ್ಮ ಧ್ಯಾನಗಳಲ್ಲಿ ತತ್ಪರನಾದ ಯತಿಯನ್ನು ನಮಸ್ಕರಿಸಬೇಕು. ॥೫೦॥

ನಮಸ್ಕಾರ ಮಾಡುವ ಕ್ರಮ

ನಿರ್ಗ್ರಂಥಾನಾಂ ನಮೋಽಸ್ತು ಸ್ಯಾದಾರ್ಯಿಕಾಣಾಂ ಚ ವಂದನಾ ।
ಶ್ರಾವಕಸ್ಯೋತ್ತಮಸ್ಯೋಚ್ಚೈರಿಚ್ಛಾಕಾರೋಽಭಿಧೀಯತೇ ॥೫೧॥

ಅರ್ಥ :- ಪರಿಗ್ರಹವಿಲ್ಲದ ದಿಗಂಬರ ಮುನಿಗಳಿಗೆ 'ನಮೋಽಸ್ತು' ಎಂಬ ಉಚ್ಚವಾದ ವಾಕ್ಯ ಪ್ರಯೋಗವೂ, ಆರ್ಯಿಕೆಯರಿಗೆ 'ವಂದನಾ' ವಂದನಾಸ್ತು ಎಂಬ ವಾಕ್ಯವೂ, ಉತ್ತಮ ಶ್ರಾವಕನಿಗೆ ಪಿಂಛಿ ಕಮಂಡಲು ಧಾರಿಯಾದ ಉದ್ದಿಷ್ಟ ಆಹಾರ ತ್ಯಾಗ ಮಾಡಿದ ಶ್ರಾವಕನಿಗೆ 'ಇಚ್ಛಾಮಿ' ಎಂಬ ವಾಕ್ಯವೂ ಹೇಳಲ್ಪಡುತ್ತದೆ. ಅಂದರೆ ಮುನಿಗಳಿಗೆ ನಮೋಸ್ತು ಎಂತಲೂ, ಆರ್ಯಿಕೆಯರಿಗೆ ವಂದನೆ ಎಂತಲೂ, ಉತ್ಕೃಷ್ಟ ಶ್ರಾವಕನಿಗೆ ಇಚ್ಛಾಮಿ ಎಂತಲೂ ನಮಸ್ಕರಿಸಬೇಕು. ॥೫೧॥

ಭೋಜನಾದಿ ಕ್ರಿಯೆಗಳಲ್ಲಿ ಪೂರ್ವಾಚಾರ್ಯರ ಮತವೇ ಪ್ರಮಾಣವು

ಭೋಜನೇ ಗಮನೇಽನ್ಯತ್ರ ಕಾರ್ಯೇ ವಾ ಯತ್ರಕುತ್ರಚಿತ್ ।
ಪೂರ್ವಾಚಾರ್ಯಮತಂ ನೂನಂ ಪ್ರಮಾಣಂ ಜಿನಶಾಸನೇ ॥೫೨॥

ಅರ್ಥ :- ಭೋಜನದಲ್ಲಿಯೂ, ಗಮನದಲ್ಲಿ ಅಂದರೆ ಸಂಚಾರದಲ್ಲಿಯೂ ಅಥವಾ ಎಲ್ಲಿಯದೇ ಆದ ಕಾರ್ಯದಲ್ಲಿಯೂ ಪೂರ್ವಪರಂಪರೆಯಿಂದ ನಡೆದುಬಂದ ಆಚಾರ್ಯರ ಮತವು ಜಿನಶಾಸನದಲ್ಲಿ ಪ್ರಮಾಣವೆಂದು ಹೇಳಲಾಗಿದೆ. ಆಹಾರ ವಿಹಾರಾದಿ ಕ್ರಿಯೆಗಳನ್ನು ಅನೂಚಾನವಾಗಿ ನಡೆದು ಬಂದ ಗುರುಪರಂಪರೆಗನುಸರಿಸಿಯೇ ಮಾಡಬೇಕೆಂದು ಅಭಿಪ್ರಾಯವು. ॥೫೩॥

ಪೂರ್ವಾಚಾರ್ಯರನ್ನು ಅತಿಕ ಮಿಸುವವನು ಮಿಥ್ಯಾದೃಷ್ಟಿ

ಪೂರ್ವಾಚಾರ್ಯಮತಿಕ್ರಮ್ಯ ಯಃ ಕುರ್ಯಾತ್ ಕಿಂಚಿದವ್ಯಸೌ ।
ಮಿಥ್ಯಾದೃಷ್ಟಿರಿತಿ ಜ್ಞೇಯೋ ನ ವಂದ್ಯಶ್ಚ ಮಹಾತ್ಮಭಿಃ ॥೫೩॥

ಅರ್ಥ :- ಯಾವನು ಪೂರ್ವಾಚಾರ್ಯರನ್ನು ಉಲ್ಲಂಘಿಸಿ ಮೇಲೆ ಹೇಳಿದ ಆಹಾರವಿಹಾರಾದಿ ಯಾವುದೇ ಕ್ರಿಯೆಯನ್ನು ಮಾಡುತ್ತಾನೆಯೋ ಈ ಮುನಿಯು ಮಿಥ್ಯಾದೃಷ್ಟಿ ಎಂದು ತಿಳಿಯಲು ಯೋಗ್ಯನಿದ್ದಾನೆ. ಮತ್ತು ಈತನು ಮಹಾತ್ಮರಿಂದ ವಂದಿಸಲು ಯೋಗ್ಯನಲ್ಲ. ಅಂದರೆ ಮೂಲ ಸಂಘದ ಗುರು ಪರಂಪರೆಯ ವಿರುದ್ಧವಾಗಿ ನಡೆಯುವವನು ಮಿಥ್ಯಾದೃಷ್ಟಿಯೂ ಅವಂದ್ಯನೂ ಆಗುತ್ತಾನೆ. ॥೫೩॥

ಯತಿಯು ಏಕಾಕಿಯಾಗಿ ಸಂಚರಿಸಬಾರದು

ಏಕಾಕಿನಾ ನ ಗಂತವ್ಯಂ ಯತಿನಾ ಸದ್ವಿತೀಯಕಃ ।
ವಿಹರನ್ ಧರ್ಮಮಾಪ್ನೋತಿ ನೈಕಾಕೀ ತು ಕದಾಚನ ॥೫೪॥

ಅರ್ಥ :- ಯತಿಯು ಒಬ್ಬೊಂಟಿಗನಾಗಿ ವಿಹಾರ—ಗಮನ ಮಾಡ ಬಾರದು. ಎರಡನೆಯವನೊಡನೆ ಕೂಡಿಕೊಂಡು ಸಂಚರಿಸುವ ಮುನಿಯು ಧರ್ಮವನ್ನು ಪಡೆಯುತ್ತಾನೆ. ಆದರೆ ಒಬ್ಬೊಂಟಿಗನು ಎಂದೂ ಧರ್ಮವನ್ನು ಪಡೆಯುವುದಿಲ್ಲ. ಅಂದರೆ ಒಬ್ಬನೇ ವಿಹಾರ ಮಾಡಿದರೆ ಸ್ವೈರಾಚಾರವೃತ್ತಿಯೂ ಇದಲ್ಲದೆ ಜೈನರಿಲ್ಲದ ಪ್ರದೇಶಕ್ಕೆ ಗೊತ್ತಿಲ್ಲದೆ ಹೋದರೆ ಅಲ್ಲಿ ಚರ್ಯಾದಿ ಕ್ರಿಯೆಗಳು ಸಾಧಿಸುವುದಿಲ್ಲ. ಆದುದರಿಂದ ಆಚಾರ್ಯ ಸಂಘದೊಡನೆ ಅಥವಾ ತನಗೆ ಸಹಾಯಕರಾದ ಇತರ ಮುನಿಗಳೊಡನೆ ಕೂಡಿಕೊಂಡು ವಿಹಾರ ಮಾಡಬೇಕು. ಇದರಿಂದ ಸ್ವೈರಾಚಾರವು ಬಿಟ್ಟು ಹೋಗುವುದು. ॥೫೪॥

ಆತ್ಮನಾ ಸಪ್ತಭಿಃ ೧ ಶ್ರೇಯಶ್ಚತುರ್ಭಿಸ್ತ್ರಿಭಿರೇವ ವಾ ।
ಸಮಂ ಗಚ್ಛನ್ ಯತಿರ್ಗಚ್ಛೇದ್ಗಮನೀಯಂ೨ ನ ಚಾಪರಃ॥೫೫

೧ ಸಪ್ತಮಃ ಶ್ರೇಯಾನ್. ೨ ಗಚ್ಛಗಣನೀಯೋ

ಅರ್ಥ :- ಗಮನೀಯ ಸ್ಥಾನಕ್ಕೆ ಏಳು ಜನ ಯತಿಗಳೊಡನೆ, ನಾಲ್ಕು ಜನ ಯತಿಗಳೊಡನೆ ಅಥವಾ ಮೂರು ಜನ ಮುನಿಗಳೊಡನೆ ಗಮನ ಮಾಡುವ ಯತಿಯು ತನ್ನಿಂದ ಪಡೆಯಲು ಯೋಗ್ಯವಾದ ಶ್ರೇಯಸ್ಸನ್ನು ಅಂದರೆ ಕಲ್ಯಾಣವನ್ನು ಪಡೆದಾನು. ಅಥವಾ ತನ್ನ ಗಚ್ಛದಲ್ಲಿ ಗಣಣೀಯನಾಗುತ್ತಾನೆ. ಅಪರ ಅಂದರೆ ಯಾರೊಡವೆಯೂ ಕೂಡಿಕೊಳ್ಳದೆ ಸ್ವತಂತ್ರ ಏಕಾಕಿಯಾಗಿ ವಿಹರಿಸುವ ಯತಿಯು ಕಲ್ಯಾಣವನ್ನು ಪಡೆಯಲಾರನು ॥೫೫॥

ಮಣಿಮಂತ್ರಾದಿಗಳನ್ನು ಮಕಾರತ್ರಯವಿಲ್ಲದೆ ಸಾಧಿಸಬೇಕು.

ಮಕಾರತ್ರಿತಯಾತೀತಮಣಿಮಂತ್ರಾದಿಸಾಧನಮ್ ।
ಕಾರ್ಯಾರ್ತ್ತೇನ ಸಮಂ ಸಿದ್ಧಮಸಿದ್ಧವದುದಾಹೃತಮ್ ॥೫೬

ಅರ್ಥ :- ಮದ್ಯ, ಮಾಂಸ ಮತ್ತು ಮಧು ಎಂಬ ಮೂರು ಮಕಾರಗಳಿಲ್ಲದೆ ಮಣಿ ಮಂತ್ರ ಮೊದಲಾದವುಗಳ ಸಾಧನವನ್ನು ಮಾಡಬೇಕು. ಅಂದರೆ ಮಣಿ ಮಂತ್ರಾದಿಗಳನ್ನು ಸಾಧಿಸುತ್ತಿರುವಾಗ ಮದ್ಯ ಮಾಂಸ ಜೇನುತುಪ್ಪಗಳನ್ನು ಬಳಸಬಾರದು. ಒಂದು ಪಕ್ಷದಲ್ಲಿ ಮಕಾರತ್ರಯದೊಡನೆ ಸಿದ್ಧವಾದರೂ ಅದು ಸಿದ್ಧಿ ಹೊಂದದೆ ಇರುವಂತೆ ಹೇಳಲಾಗಿದೆ. ಅಂದರೆ ಮಕಾರತ್ರಯದ ಉಪಯೋಗದಿಂದ ಮಂತ್ರಾದಿಗಳು ಸಿದ್ಧಿಸಿದ್ದರೂ ಪ್ರಯೋಜನವಿಲ್ಲ. ಏಕೆಂದರೆ ಅದು ಪಾಪ ಕರ್ಮಗಳ ಬಂಧಕ್ಕೆ ಕಾರಣವಾಗಿದೆ. ।೫೬॥

ಸಿದ್ಧಾಂತವನ್ನು ಓದುವ ನಿಷೇಧ

ರಾಜೋಪಾಸಕಸಾಧೂನಾಂ ಮರಣೇ ಗ್ರಹಣಾದಿಕೇ ।
ಪರ್ವಣ್ಯಪಿ ನ ವಾಚ್ಯಃ ಸ್ಯಾತ್ಸಿದ್ಧಾಂತೋ ಮುನಿಪುಂಗವೈಃ ॥೫೭

ಅರ್ಥ :- ದೊರೆ, ಶ್ರಾವಕ ಮತ್ತು ಯತಿ-ಮುನಿ ಇವರ ಮರಣ ಸಮಯದಲ್ಲಿಯೂ, ಸೂರ್ಯಚಂದ್ರರ ಗ್ರಹಣ ಮೊದಲಾದ ಕಾಲದಲ್ಲಿಯೂ, ಅಷ್ಟಮೀ ಚತುರ್ದಶೀ ಮೊದಲಾದ ಪರ್ವಕಾಲದಲ್ಲಿಯೂ ಮುನಿಪುಂಗವರಿಂದ ಸಿದ್ಧಾಂತಶಾಸ್ತ್ರವು ವಾಚನ ಮಾಡಲು ಯೋಗ್ಯವಲ್ಲವು. ಆದಿ ಶಬ್ದದಿಂದ ದಿಗ್ದಾಹ, ಭೂಮಿಕಂಪನ ಮೊದಲಾದುವುಗಳನ್ನು ಗ್ರಹಿಸಬೇಕು. ॥೫೭॥

ಪ್ರಾಣ ಹೋಗುವ ಪ್ರಸಂಗ ಬಂದರೂ ಮುನಿಯು
ವಸ್ತ್ರವನ್ನು ಸ್ವೀಕರಿಸಬಾರದು.

ನೈರ್ಗ್ರಂಥ್ಯಂ ರಕ್ಷಯೇದ್ಧೀಮಾನ್ ಶೀಲವಸ್ತ್ರಸಮಾವೃತಃ ।
ನ ವಸ್ತ್ರಂ ಗೃಹ್ಯತೇ ಕ್ವಾಪಿ ಪ್ರಾಣತ್ಯಾಗೇಽಪಿ ಯೋಗಿನಾ
॥೫೮॥

ಅರ್ಥ :– ಶೀಲವೆಂಬ ವಸ್ತ್ರದಿಂದ ಸುತ್ತಲ್ಪಟ್ಟ ಬುದ್ಧಿವಂತನಾದ ಯತಿಯು ನೈರ್ಗ್ರಂಥ್ಯವನ್ನು ಅಂದರೆ ನಿಷ್ಪರಿಗ್ರಹತೆಯನ್ನು ರಕ್ಷಿಸಬೇಕು. ಪ್ರಾಣ ಹೋಗುವ ಪ್ರಸಂಗ ಒದಗಿದರೂ ಸಹ ಯೋಗಿಯು ಎಲ್ಲಿಯೂ ವಸ್ತ್ರವನ್ನು-ಬಟ್ಟೆಯನ್ನು ಗ್ರಹಿಸುವುದಿಲ್ಲ. ॥೫೮॥

ತಾನು ಶುದ್ಧನಾಗಿದ್ದರೆ ಯಾರೂ ಏನೂ ಮಾಡಲಾರರು

ಭೂಪತಿರ್ವಾ ಶ್ರಾವಕೋ ವಾ ಮುನೇ: ಕಿಂ ಕರ್ತುಮೀಶ್ವರಃ।
ಯಸ್ಯ ಚಿತ್ತಂ ಸದಾ ಶುದ್ಧಬುದ್ಧಾತ್ಮವ್ಯವಸಾಯುಕಮ್ ॥೫೯॥

ಅರ್ಥ :– ಯಾವನ ಅಂತಃಕರಣವು ಯಾವಾಗಲೂ ಶುದ್ಧನೂ ಬುದ್ಧನೂ ಆದ ತನ್ನಾತ್ಮನ ಸ್ವರೂಪ ಪ್ರಾಪ್ತಿಯಲ್ಲಿ ಪ್ರಯತ್ನ ಶೀಲವಾಗಿದೆಯೋ ಅಂಥ ಮುನಿಗೆ ರಾಜನಾಗಲಿ ಅಥವಾ ಶ್ರಾವಕನಾಗಲಿ ಏನು ಮಾಡಲು ಸಮರ್ಥನು? ತನ್ನ ಶುದ್ಧಾತ್ಮನನ್ನು ಧ್ಯಾನಿಸುವ ಮುನಿಗೆ ಯಾರೂ ಏನೂ ಮಾಡಲಾರರು.

ತಮ್ಮ ಶುದ್ಧ ಮಾರ್ಗವನ್ನು ಎಂದೂ ಬಿಡಬಾರದು

ಅದ್ಯ ವಾ ಶತಕೇಽತೀತೇ ವರ್ಷಾಣಾಂ ವಾಽಪಗಚ್ಛತು ।
ವಪುರೇತನ್ನ ಪಂಥಾನಂ ತ್ಯಜಂತಿ-ಸುಧಿಯೋ ಜನಾಃ ॥೬೦॥

ಅರ್ಥ :– ಈ ಶರೀರವು ಈಗಲೇ ನಷ್ಟವಾಗಲಿ, ಅಥವಾ ನೂರು ವರ್ಷಗಳು ಅತಿಕ್ರಮಿಸಿ ಹೋದ ಮೇಲೆ ನಷ್ಟವಾಗಲಿ, ಆದರೆ ಜ್ಞಾನಿ ಜನರು ಸಮೀಚೀನವಾದ ಮಾರ್ಗವನ್ನು ಬಿಡುವುದಿಲ್ಲ. ॥೬೦॥

ಪ್ರತಿಕ್ರಮಣ ಎಲ್ಲಿ ಮಾಡಬಾರದು ?

ವಸತಾ ಯತ್ರ ಪಂಚಾಕ್ಷಮೃತೀ ೧ ರುಧಿರಮೇವ ವಾ ।
ಪತಿತಂ ತತ್ರ ನೋ ಕಲ್ಪ್ಯಂ ಪ್ರತಿಕ್ರಮಣಮಂಜಸಾ ॥೬೧॥

ಅರ್ಥ :- ಯಾವ ಸ್ಥಳದಲ್ಲಿ ಪಂಚೇಂದ್ರಿಯ ಪ್ರಾಣಿಯು ಸತ್ತಿದೆಯೋ ಅಥವಾ ರಕ್ತವು ಬಿದ್ದಿದೆಯೋ ಆ ಸ್ಥಾನದಲ್ಲಿ ನಿಶ್ಚಯವಾಗಿ ಮುನಿಯು ಪ್ರತಿಕ್ರಮಣವನ್ನು ಮಾಡಬಾರದು. ॥೬೧॥

ಹೇಗೆ ಸಿದ್ಧಾಂತವನ್ನು ಓದಬಾರದು ?

ಸಿದ್ಧಾಂತವಾಚನೇ ನೈವ ಪಟ್ಟೇ ತಿಷ್ಠೇದ್ದಿಗಂಬರಃ ।
ಚತುರಂಗುಲಮಾನಸ್ತು ಶಸ್ಯತೇ ವಂದನಾಸ್ವಪಿ ॥೬೨॥

ಅರ್ಥ :- ದಿಗಂಬರ ಮುನಿಯು ಸಿದ್ಧಾಂತವನ್ನು ಓದುವಾಗ ಹಲಗೆಯ ಮಣೆಯ ಮೇಲೆ ನಿಂತುಕೊಳ್ಳಬಾರದು. ಅಂದರೆ ನಿಂತುಕೊಂಡು ಸಿದ್ಧಾಂತವನ್ನು ಓದಬಾರದು. ಪರಂತು ವಂದನಾಕ್ರಿಯೆಗಳಲ್ಲಿ ನಾಲ್ಕು ಅಂಗುಲ ಮಾಂದಪ್ರಮಾಣವುಳ್ಳ ಹಲಗೆ-ಮಣೆಯು ಪ್ರಶಂಸನೀಯವೆಂದು ಹೇಳಲ್ಪಟ್ಟಿದೆ. ॥೬೨॥

ಸೂತ್ರವಾಚನದಲ್ಲಿ ಭೂಶುದ್ಧಿ ಇರಬೇಕು

ಭೂಶುದ್ಧ್ಯಾದಿ ಸಮಾಯುಕ್ತೇ ಕ್ಷೇತ್ರೇ ಸೂತ್ರಾದಿವಾಚನಮ್ ।
ಕುರ್ವನ್ ಯತಿಃ ಪರಾಂ ಕಾಷ್ಠಾಂ ಮರಣೇ ಲಭತೇತರಾಮ್ ॥೬೩॥

ಅರ್ಥ :- ಭೂಮಿಃಶುದ್ಧಿ ಮೊದಲಾದವುಗಳಿಂದ ಕೂಡಿದ ಕ್ಷೇತ್ರದಲ್ಲಿ ಅಂದರೆ ಸ್ಥಾನದಲ್ಲಿ ಸೂತ್ರಾದಿಗಳನ್ನು ಓದುವ ಮುನಿಯು ಮರಣಕಾಲದಲ್ಲಿ

---

೧ ಪಂಚಾಕ್ಷೋ ಮೃತೋಃ ।

ಪರಮ ಉತ್ಕರ್ಷವನ್ನು ಪಡೆಯುತ್ತಾನೆ. ಅಂದರೆ ಶುದ್ಧಿಪೂರ್ವಕ ಸೂತ್ರಾದಿ ವಾಚನವನ್ನು ಮಾಡಿದರೆ ಮರಣವೂ ಸಹ ಚೆನ್ನಾಗಿ ಆಗಿ ಉತ್ಕರ್ಷವನ್ನು ಸಾಧುವು ಪಡೆಯುತ್ತಾನೆ. ||೬೩||

ಸೂತ್ರಪಾಠವನ್ನು ಯಾವಾಗ ಮಾಡಬಾರದು ?

ಸೂತ್ರಪಾಠಂ ಪ್ರದೋಷಾದೌ ವರ್ಜ್ಯಂ[೧]ಕುರ್ಯಾತ್ಸಮಾಹಿತಃ।
ಅನ್ಯಥಾ ನ ಸಮಾಪ್ನೋತಿ ಫಲಂ ಚಾರು ಪಠನ್ನಪಿ ||೬೪||

ಅರ್ಥ :- ಸಾವಧಾನಾದ ಯತಿಯು ಪ್ರದೋಷ ಮೊದಲಾದ ಕಾಲಗಳಲ್ಲಿ ಅಂದರೆ ರಾತ್ರಿಯ ಪ್ರಾರಂಭದಲ್ಲಿ ಸೂರ್ಯೋದಯದ ಪ್ರಾರಂಭದಲ್ಲಿ ಮಧ್ಯಾಹ್ನದ ಪ್ರಾರಂಭದಲ್ಲಿ ಸೂತ್ರಪಾಠವನ್ನು ತ್ಯಾಗಮಾಡತಕ್ಕದ್ದು. ಅನ್ಯಥಾ ಅಂದರೆ ಹಾಗಲ್ಲದೆ ಹೋದರೆ ಚಂದವಾಗಿ ಪಠಿಸುವವನಾದರೂ ಸಹ ಪ್ರಯೋಜನವನ್ನು ಪಡೆಯುವುದಿಲ್ಲ. ಅಂದರೆ ಅಕಾಲದಲ್ಲಿ ಸ್ವಾಧ್ಯಾಯವನ್ನು ಮಾಡಬಾರದೆಂದು ಭಾವವು. ||೬೫||

ಸಿದ್ಧಾಂತಾಚಾರ ಪುಸ್ತಕಗಳನ್ನು ಯಾರ ಮುಂದೆ ಓದಬೇಕು ?

ಸಿದ್ಧಾಂತಾಚಾರಪುಸ್ತಾನಿ ನ ವಾಚ್ಯಾನಿ ವಿನಾ ವಿದಮ್ ।
ಪ್ರಾಯಶ್ಚಿತ್ತಂ ತು ದಾತವ್ಯಂ ಯಥಾಶಾಸ್ತ್ರಂ ಪರೀಕ್ಷ್ಯ ತಮ್[೨]
||೬೫||

ಅರ್ಥ :- ವಿದ್ವಾಂಸನನ್ನು ಹೊರತಾಗಿ ಸಿದ್ಧಾಂತ ಆಚಾರಾದಿ ಪುಸ್ತಕಗಳು ಓದಲಿಕ್ಕೆ ಯೋಗ್ಯಗಳಲ್ಲವು. ಆ ಸಿದ್ಧಾಂತಾಚಾರ ಗ್ರಂಥಗಳನ್ನು ಓದುವವನನ್ನು ಪರೀಕ್ಷಿಸಿ ಶಾಸ್ತ್ರಾನುಸಾರವಾಗಿ ಆತನಿಗೆ ಪ್ರಾಯಶ್ಚಿತ್ತವನ್ನು ಕೊಡಬೇಕು. ಅಂದರೆ ಸಿದ್ಧಾಂತದ ಅರ್ಥವನ್ನು ಗ್ರಹಣಮಾಡಲು ಮತ್ತು

೧ ಪ್ರದೋಷಾದಿವರ್ಜ್ಜಂ ' ೨ ಪರೀಕ್ಷಿತಂ ।

ಪೂರ್ವಾಪರ ಸಂದರ್ಭಾದಿಗಳನ್ನೆಲ್ಲ ತಿಳಿದ ಸರ್ವಶಾಸ್ತ್ರಪಾರಂಗತನಾದ ವಿದ್ವಾನ್ ಮುನಿಯು ಸಿದ್ಧಾಂತಾಚಾರ ಪುಸ್ತಕಗಳನ್ನು ತಾನು ಪಠಿಸಬೇಕು ಇತರ ಕೇಳುವವರೂ ಹೀಗಿದ್ದರೇನೇ ಆತನ ಮುಂದೆ ಓದಬೇಕು. ಅನ್ಯಥಾ ಪ್ರಾಯಶ್ಚಿತ್ತಕ್ಕೆ ಪಾತ್ರನಾಗುತ್ತಾನೆ ಎಂದು ಭಾವವು ||೬೫|

ಆಚಾರ್ಯ ಮೊದಲಾದವರಿಗೆ ವಂದನೆಯ ಕ್ರಮ

ಗಣಾಧೀಶಾನ್ನಮೇದ್ಧೀಮಾನ್ ಗುರುಭಕ್ತ್ಯಾ ಸಮಾಹಿತಃ ೧ |
ವಂದನಾಂ ಪ್ರತಿ ದದ್ಯಾಚ್ಚ ವಂದನಾಂ ದೀಕ್ಷಿತೇಷ್ವಪಿ ||೬೬||

ಅರ್ಥ :- ಮುನಿಯು ಗುರುಭಕ್ತಿಯೊಡನೆ ಕೂಡಿದವನಾಗಿ ಗಣಾಧೀಶರನ್ನು ಅಂದರೆ ಸಂಘದ ಸಂಚಾಲಕರಾದ ಆಚಾರ್ಯರನ್ನು ನಮಸ್ಕರಿಸಬೇಕು. ಮತ್ತು ದೀಕ್ಷೆಪಡೆದ ಸಾಧರ್ಮಿ ಮುನಿಗಳಲ್ಲಿಯೂ ಸಹ ವಂದನೆಗೆ ಪ್ರತಿಯಾಗಿ ವಂದನೆಯನ್ನು ಮಾಡಬೇಕು. ಅಂದರೆ ಇತರ ಸಾಮಾನ್ಯ ಮುನಿಗಳು ಪರಸ್ಪರವಾಗಿ ನಮಸ್ಕಾರಕ್ಕೆ ಪ್ರತಿ ನಮಸ್ಕಾರ ಮಾಡಬೇಕು. ||೬೬||

ವಿಸಂಘ್ಯ ಯತಿಗಳಿಂದ ರಚಿಸಲ್ಪಟ್ಟ ಗ್ರಂಥಗಳು ಗ್ರಾಹ್ಯವಲ್ಲ.

ಶ್ರೀಭದ್ರಬಾಹುಃ ಶ್ರೀಚಂದ್ರೋ ಜಿನಚಂದ್ರೋ ಮಹಾಯತಿಃ೨ |
ಗೃದ್ಧ್ರಪಿಚ್ಛಗುರುಶ್ರೀಮಾಂಲ್ಲೋಹಾಚಾರ್ಯೋ ೩
ಜಿತೇಂದ್ರಿಯಃ ||೬೭||

ಏಲಾಚಾರ್ಯಃ ಪೂಜ್ಯಪಾದಃ ಸಿಂಹನಂದೀ ಮಹಾಕವಿಃ |
ಜಿನಸೇನೋ ವೀರಸೇನೋ ಗುಣನಂದೀ ಮಹಾತಪಾಃ ||೬೮||

---

೧ ವಿಶೇಷತಃ | ೨ ಮಹಾಮತಿಃ ೩ ಶ್ರೀಮಲ್ಲೋಹಾಚಾರ್ಯೋ |

ಸಮಂತಭದ್ರಶ್ಶ್ರೀಕುಂಭಃ ಶಿವಕೋಟಿಶ್ಶಿವಂಕರಃ ।
ಶಿವಾಯನೋ ವಿಷ್ಣುಸೇನೋ ಗುಣಭದ್ರೋ ಗುಣಾಧಿಕಃ ॥೬॥
ಅಕಲಂಕೋ ಮಹಾಪ್ರಾಜ್ಞಃ ಸೋಮದೇವೋ ವಿದಾಂವಃ ।
ಪ್ರಭಾಚಂದ್ರೋ ನೇಮಿಚಂದ್ರ ಇತ್ಯಾದ್ಯೈರ್ಮುನಿಸತ್ತಮೈಃ
॥೨೦॥

ಯಚ್ಛಾಸ್ತ್ರಂ ರಚಿತಂ ನೂನಂ ತದೇವಾದೇಯಮನ್ಯಕೈಃ ।
ವಿಸಂಘ್ಯೈ ರಚಿತಂ ನೈವ ಪ್ರಮಾಣಂ ಸಾಧ್ವಪಿ ಸ್ಫುಟಮ್ ॥೨೧॥

ಅರ್ಥ :- ಶ್ರೀಭದ್ರಬಾಹು, ಶ್ರೀಚಂದ್ರ, ಮಹಾಯತಿಯಾದ ಜಿನಚಂದ್ರ, ಗೃಧ್ರಪಿಚ್ಛ, ಜಿತೇಂದ್ರಿಯನಾದ ಪಲಾಚಾರ್ಯ, ಪೂಜ್ಯಪಾದ, ಸಿಂಹನಂದಿ, ಮಹಾಕವಿಯಾದ ಜಿನಸೇನ, ವೀರಸೇನ, ಗುಣನಂದಿ, ದೊಡ್ಡ ತಪಸ್ವಿಯಾದ ಸಮಂತಭದ್ರ, ಶ್ರೀಕುಂಭ, ಕಲ್ಯಾಣಕಾರಿಯಾದ ಶಿವಕೋಟಿ ಮುನಿ, ಶಿವಾಯನ, ವಿಷ್ಣುಸೇನ, ಗುಣಗಳಿಂದ ಶ್ರೇಷ್ಠನಾದ ಗುಣಭದ್ರ, ಮಹಾಪ್ರಾಜ್ಞ ಅಂದರೆ ಬುದ್ಧಿಶಾಲಿಯಾದ ಅಕಲಂಕಸ್ವಾಮಿ, ವಿದ್ವಾಂಸರಲ್ಲಿ ಶ್ರೇಷ್ಠನಾದ ಸೋಮದೇವಸೂರಿ, ಪ್ರಭಾಚಂದ್ರ, ನೇಮಿಚಂದ್ರ ಮೊದಲಾದ ಮುನಿಸತ್ತಮ ಅಂದರೆ ಶ್ರೇಷ್ಠರಾದ ಮುನಿಗಳಿಂದ ಯಾವ ಶಾಸ್ತ್ರವು ರಚಿಸಲ್ಪಟ್ಟಿದೆಯೋ ಅದೇ ಶಾಸ್ತ್ರವು ಇತರರಿಂದ ಉಪಾದೇಯವಾಗಿದೆ. ಸಂಘಬಾಹ್ಯರಾದ ಶ್ವೇತಾಂಬರ, ಯಾಪನೀಯ ಮೊದಲಾದ ಸಂಘದ ಮುನಿಗಳಿಂದ ರಚಿಸಲ್ಪಟ್ಟ ಶಾಸ್ತ್ರವು ಸಾಧು ಅಂದರೆ ಚನ್ನಾಗಿದ್ದರೂ ಸ್ಪಷ್ಟವಾಗಿ ಅದು ಪ್ರಮಾಣ ಭೂತವಾಗಲಾರದು. ಅಂದರೆ ಮೂಲಸಂಘದ ಆಚಾರ್ಯ ಪರಂಪರೆಯಿಂದ ರಚಿಸಲ್ಪಟ್ಟ ಶಾಸ್ತ್ರಗಳೇ ಪ್ರಮಾಣವಾಗಿವೆ. ಇತರರು ರಚಿಸಿದ ಶಾಸ್ತ್ರವು ಎಂದೂ ಗ್ರಾಹ್ಯವಲ್ಲ. ।೬೩-೨೧॥

ಇವರನ್ನೇ ಏಕೆ ಪ್ರಮಾಣ ಮಾನಿಸಬೇಕು ?

ಪೂರ್ವಾಚಾರ್ಯವಚಃ ಶ್ರೀಮತ್ಸರ್ವಜ್ಞವಚನೋಪಮಮ್ ।
ತಜ್ಞಾನನ್ನನಗಾರೋಽತ್ರ ಪೂಜ್ಯಃ ಸ್ಯಾದಖಿಲೈರ್ಜನೈಃ ॥೨೨॥

ಅರ್ಥ :– ಪ್ರಾಚೀನ ಮೂಲ ಸಂಘದ ಆಚಾರ್ಯರ ವಚನವು ಅಂತರಂಗ ಬಹಿರಂಗ ಲಕ್ಷ್ಮಿಸಂಪನ್ನನಾದ ಸರ್ವಜ್ಞ ಪರಮೇಷ್ಠಿಯ ವಚನಕ್ಕೆ ಸಮಾನವಾಗಿದೆ. ಅದನ್ನು ತಿಳಿಯುವ ಅನಗಾರನು ಈ ಲೋಕದಲ್ಲಿ ಎಲ್ಲ ಜನರಿಂದಲೂ ಪೂಜಿಸಲು ಯೋಗ್ಯನಾಗುತ್ತಾನೆ. ॥೭॥

ವಿಸಂಘೈಸ್ಸಮಮಧ್ಯಾತ್ಮಪ್ರಾಯಶ್ಚಿತ್ತವಿಧಿಕ್ರಿಯಾಃ ।
ಸಿದ್ಧಾಂತಾಚಾರಭಾವಾಶ್ಚ ನಾಲೋಚ್ಯಾ ಯತಿನಾ ಸದಾ ೧
॥೭೩॥

ಅರ್ಥ :– ಯಾವಾಗಲೂ ಮುನಿಯು ಅನ್ಯಸಂಘದವರೊಡನೆ ಅಂದರೆ ಜೈನಾಭಾಸ ಸಂಘದ ಯತಿಗಳೊಡನೆ ಅಧ್ಯಾತ್ಮ, ಪ್ರಾಯಶ್ಚಿತ್ತ ಅನುಷ್ಠಾನ ಕ್ರಿಯೆಗಳನ್ನೂ, ಸಿದ್ಧಾಂತಾಚಾರ ಗ್ರಂಥಗಳ ಅಭಿಪ್ರಾಯಗಳನ್ನೂ ಆಲೋಚಿಸಬಾರದು.

ದಿಗಂಬರತ್ವಾದಿ ದ್ರವ್ಯಲಿಂಗವಿಲ್ಲದವರಿಗೆ ನಮಸ್ಕರಿಸಬಾರದು

ದ್ರವ್ಯಲಿಂಗಂ ಸಮಾದಾಯ ಭಾವಲಿಂಗೀ ಭವೇನ್ಮುನಿಃ ೨ ।
ವಿನಾ ತೇನ ನ ವಂದ್ಯಃ ಸ್ಯಾನ್ನಾನಾವ್ರತಧರೋಽಪಿ ಸನ್ ॥೭೪॥

ಅರ್ಥ :– ಮುನಿಯು ದ್ರವ್ಯಲಿಂಗವನ್ನು ಗ್ರಹಣಮಾಡಿ ಭಾವಲಿಂಗ ಧಾರಿಯಾಗತಕ್ಕದ್ದು. ಅಂದರೆ ಮೂರು ಗುಪ್ತಿ ಮತ್ತು ಐದು ಸಮಿತಿಗಳೆಂಬ ಅಷ್ಟಮಾತೃಕೆಗಳನ್ನು ಧರಿಸಬೇಕು. ಏಕೆಂದರೆ ದಿಗಂಬರತ್ವಾದಿ ದ್ರವ್ಯಲಿಂಗದ ಹೊರತಾಗಿ ಅನೇಕ ವ್ರತಗಳನ್ನು ಧರಿಸುವವನಾದಾಗ್ಯೂ ಸಹ ವಂದನೀಯನಾಗುವುದಿಲ್ಲ. ॥೭೪॥

---

೧ ಸಹ । ೨ ಯತಿಃ ।

ಸರ್ವರಿಗೂ ಕಾಣುವ ಕೆಲವು ದ್ರವ್ಯ ಮುದ್ರೆಗಳು

ಅಚೇಲಕ್ಯಂ ಶಿರಃಕೂರ್ಚಲೋಚೋಽಧಃಕೇಶಧಾರಣಮ್ ।
ನಿರಾಭರಣತಾಚ್ಛಿನ್ನದೇಹತಾ ಪಿಚ್ಛಧಾರಣಮ್ ॥೭೫॥

ಅರ್ಥ :– ದಿಗಂಬರತ್ವ, ತಲೆಯ ಮೇಲಿನ ಕೂದಲುಗಳನ್ನು ಲೋಚ ಮಾಡುವುದು, ಕೆಳಭಾಗದ ಕೂದಲುಗಳನ್ನು ಧರಿಸುವುದು, ಅಲಂಕಾರ ಒಡವೆಗಳಿಲ್ಲದಿರುವಿಕೆ, ಅಚ್ಛಿನ್ನದೇಹತಾ–ಅಂಗ ಹೀನತೆ ಇಲ್ಲದೆ ಇರುವುದು ಮತ್ತು ಪಿಂಛಿಯನ್ನು ಧರಿಸುವುದು ಇವೆಲ್ಲ ಸರ್ವರಿಗೂ ಗೋಚರವಾಗುವ ಕೆಲವು ದ್ರವ್ಯ ಮುದ್ರೆಗಳಾಗಿವೆ. ॥೭೫॥

ದ್ರವ್ಯಲಿಂಗದಿಂದಲೇ ಯತಿಯು ಪೂಜ್ಯನಾಗುತ್ತಾನೆ.

೧ ಸರ್ವತ್ರ ಮುದ್ರಯಾ ವಂದ್ಯೋ ನಿರ್ಮುದ್ರೋ ನೈವ ಮನ್ಯತೇ।
ರಾಜಮುದ್ರಾಧರೋಽತ್ಯಂತಹೀನವಚ್ಛಾಸ್ತ್ರ ನಿರ್ಣಯಃ ॥೭೬॥

ಅರ್ಥ :– ಹೇಗೆ ಉಂಗುರ, ಕಿರೀಟ, ಚಾಮರ ಮೊದಲಾದ ರಾಜ ಚಿಹ್ನೆಗಳನ್ನು ಧರಿಸಿದ ರಾಜನು ಆ ರಾಜ ಮುದ್ರೆಯಿಂದ ಎಲ್ಲ ಕಡೆಗೂ ಆದರಣೀಯನಾಗುತ್ತಾನೆಯೋ ಹಾಗೆ ಎಲ್ಲ ಕಡೆಗೂ ದಿಗಂಬರತ್ವ, ಕೇಶಲೋಚ, ಅಧಃಕೇಶಧಾರಣ, ನಿರಾಭರಣತೆ, ಅಚ್ಛಿನ್ನದೇಹತೆ, ಪಿಂಛಿಧಾರಣೆ ಎಂಬ ದ್ರವ್ಯ ಮುದ್ರೆಯನ್ನು ಧಾರಣ ಮಾಡಿದ ಯತಿಯು ಸರ್ವರಿಂದಲೂ ನಮಸ್ಕರಿಸಲ್ಪಡುತ್ತಾನೆ. ಉಕ್ತ ಮುದ್ರೆಗಳಿಲ್ಲದ ಯತಿಯು ಅತ್ಯಂತ ಹೀನನಂತೆ ಕಾಣಲ್ಪಡುತ್ತಾನೆ. ಹೀಗೆ ಶಾಸ್ತ್ರದ ನಿರ್ಣಯವಿದೆ ಅಂದರೆ ಮೇಲೆ ಹೇಳಿದ ದ್ರವ್ಯಮುದ್ರೆಗಳಿಲ್ಲದವನನ್ನು ಮುನಿ ಎಂದು ತಿಳಿಯಬಾರದು. ಮೇಲೆ ಹೇಳಿದ ದ್ರವ್ಯಮುದ್ರೆಯನ್ನು ಯಾರು ಧರಿಸಿಲ್ಲವೋ ಅವರು ಯತಿ

೧ ಮುದ್ರಾ ಸರ್ವತ್ರ ಸಾಮಾನ್ಯಾನ್ನಿರ್ಮುದ್ರೋ ನೈವ ಮನ್ಯತೇ ।
ಇತಿ ಪಾಠಭೇದಃ

ಗಳಲ್ಲ ಅವರಿಗೆ ನಿರ್ಗ್ರಂಥ ಮುನಿ ಎಂದು ತಿಳಿದು ಭಕ್ತಿ ಮಾಡಬಾರದು.
||೭೬||

ಸ್ಥಾವರಂ ದೇಹಭೇದೇನ ವ್ರತಭೇದೇನ ೧ ಲಿಂಗಿನಮ್ ।
ಉಭಯೋರ್ಭಿನ್ನಲಿಂಗತ್ವಾನ್ನಾರ್ಚಯೇನ್ನಾಭಿವಂದಯೇತ್
||೭೭||

ಅರ್ಥ :- ಹರಿಹರಾದಿ ಮೂರ್ತಿಗಳು ಸ್ಥಾವರ ಪ್ರತಿಮೆಗಳೆಂದು ಹೇಳಲ್ಪಡುತ್ತವೆ. ಅಂಥ ಪ್ರತಿಮೆಗಳಿಗೆ ಅರಿಹಂತನೆಂದು ತಿಳಿದು ಪೂಜೆ ವಂದನೆಗಳನ್ನು ಮಾಡಬಾರದು. ಜಟಾಧರಿಸುವುದು, ಪಂಚಾಗ್ನಿ ತಪಸ್ಸು ಮಾಡುವುದು, ಶರೀರಕ್ಕೆಲ್ಲ ಭಸ್ಮಹಚ್ಚುವುದು, ಕಷಾಯಾಂಬರ ಧರಿಸುವುದು ಮೊದಲಾದ ವ್ರತಭೇದದಿಂದ ಮೇಲೆ ಹೇಳಿದ ನಿರ್ಗ್ರಂಥ ಯತಿಗಳ ಲಿಂಗದದೆಸೆಯಿಂದ ಅತ್ಯಂತ ಭಿನ್ನನಾದ ಲಿಂಗಿಯನ್ನು, ನಿರ್ಗ್ರಂಥ ೨೮ ಮೂಲ ಗುಣಗಳನ್ನು ಧರಿಸಿದ ಯತಿಯೆಂದು ತಿಳಿದು ಪೂಜಿಸಬಾರದು ಮತ್ತು ವಂದಿಸಬಾರದು. ಏಕೆಂದರೆ ಸ್ಥಾವರಬಿಂಬ ಅರಹಂತ ಬಿಂಬಗಳಲ್ಲಿ ಹಾಗೂ ಜೈನ ಸಾಧು ಅನ್ಯಸಾಧುಗಳಲ್ಲಿ ವ್ರತಭೇದ ಹಾಗೂ ಲಿಂಗಭೇದಗಳಿವೆ.

ಗುರು ಯಾರು ?

೨ ದೋಷಚ್ಛೇದಕೃತಾಂ ಹ್ಯೇಷ ಗುರುರಿತ್ಯಭಿಧೀಯತೇ ।
ದೀಕ್ಷಾದಾತಾಽಧ್ಯಾಪಯಿತಾ ಕೃತಾಚಾರ್ಯಾದಿವಾಚನಃ ||೭೮||

ಯಾವ ಯತಿಯು ದೀಕ್ಷೆಯನ್ನು ಕೊಡುತ್ತಾನೆಯೋ, ಶಿಷ್ಯ ಮುನಿಗಳಿಗೆ ಶಾಸ್ತ್ರವನ್ನು ಓದಿಸುತ್ತಾನೆಯೋ ಮತ್ತು ಆಚಾರ್ಯರಿಗೆ ಯೋಗ್ಯವಾದ ಆಚಾರಾದಿ ಗ್ರಂಥಗಳನ್ನು ವಾಚನ ಮಾಡಿದ್ದಾನೆಯೋ ಆತನು ತಾವು ಮಾಡಿದ ದೋಷಗಳನ್ನು ಪ್ರಾಯಶ್ಚಿತ್ತದಿಂದ ದೂರಮಾಡತಕ್ಕ ಮುನಿಗಳಲ್ಲಿ ಗುರು ಎಂದು ಹೇಳಲ್ಪಡುತ್ತಾನೆ ||೭೮||

---

೧ ವ್ರತಭಂಗೇನ ೨ ದೋಷಚ್ಛೇದೀ ಕೃತಾಂತೇಷ್ವಿಗುರ್ರುರಿತ್ಯಭಿಧೀಯತೇ।

ದ್ರವ್ಯಲಿಂಗವು ಭಾವಲಿಂಗಕ್ಕೆ ಕಾರಣವು

ದ್ರವ್ಯಲಿಂಗಮಿದಂ ಜ್ಞೇಯಂ ಭಾವಲಿಂಗಸ್ಯ ಕಾರಣಮ್ ।
ತದಧ್ಯಾತ್ಮಕೃತಂ ಸ್ಪಷ್ಟಂ ನ ನೇತ್ರವಿಷಯಂ ಯತಃ ॥೭೯॥

ಅರ್ಥ :- ಈ ದ್ರವ್ಯಲಿಂಗವು ದಿಗಂಬರ ಮುದ್ರೆಯು ಭಾವಲಿಂಗಕ್ಕೆ ಸಮ್ಯಗ್ದರ್ಶನ ಪೂರ್ವಕವಾದ ಚಾರಿತ್ರಮೋಹನೀಯ ಕರ್ಮದ ಕ್ಷಯ ಉಪಶಮ ಮತ್ತು ಕ್ಷಯೋಪಶಮಕ್ಕೆ ಕಾರಣವಾಗಿದೆ. ಅಂದರೆ ಅದು ಚಾರಿತ್ರ ಮೋಹನೀಯ ಕರ್ಮದ ಅಭಾವದಿಂದ ಪ್ರಾಪ್ತವಾಗುತ್ತದೆ. ದ್ರವ್ಯಲಿಂಗದ ಹೊರತಾಗಿ ಭಾವಲಿಂಗವು ಎಂದೂ ಪ್ರಾಪ್ತವಾಗಲಾರದು. ಆದರೆ ದ್ರವ್ಯ ಲಿಂಗಪೂರ್ವಕವಾಗಿಯೇ ಆಗುತ್ತದೆ. ಏಕೆಂದರೆ ಆತ್ಮನಲ್ಲಿ ಧರಿಸಲ್ಪಟ್ಟ ಆ ಭಾವಲಿಂಗವು ವ್ಯಕ್ತವಾಗಿ ಕಣ್ಣಿನ ವಿಷಯವಲ್ಲ. ಅಂದರೆ ಭಾವಲಿಂಗವು ಆತ್ಮನ ಪರಿಣಾಮುಸ್ವರೂಪವಾದ್ದರಿಂದ ನೇತ್ರಕ್ಕೆ ಕಾಣಿಸುವುದಿಲ್ಲ. ದ್ರವ್ಯ ದ್ರವ್ಯಲಿಂಗವು ಮಾತ್ರ ಎಲ್ಲರಿಗೂ ಕಾಣಿಸುತ್ತದೆ. ॥೭೯॥

ಬೇರೆ ಮುನಿಯು ಬಂದಾಗ ಸ್ವಾಗತಾದಿಗಳನ್ನು ಮಾಡಬೇಕು.

ಆಗತೇ ಸ್ವಾಗತಂ ಕುರ್ಯಾದ್ಗಚ್ಛಂತಂ ನ ನಿವಾರಯೇತ್ ।
ತಿಷ್ಠಂತಂ ಕಾರಯೇ[೧]ದ್ಭಿಕ್ಷಾಮೇಷ ಧರ್ಮಃ ಸನಾತನಃ॥೮೦॥

ಅರ್ಥ :- ಮುನಿಯು ಬೇರೆ ಸ್ಥಾನದಿಂದ ಯಾರಾದರೂ ಮುನಿಯು ಬರಲಾಗಿ ಸ್ವಾಗತವನ್ನು ಮಾಡಬೇಕು. ಅಂದರೆ ಆತನನ್ನು ಆದರದಿಂದ ಕರತರಬೇಕು, ಕುಶಲವನ್ನು ಕೇಳಬೇಕು. ಹೋಗುವಾತನನ್ನು ತಡೆಯಬಾರದು. ನಿಲ್ಲುವಂತಹವನನ್ನು ಭೀಕ್ಷೆ ಮಾಡಿಸಬೇಕು. ಇದು ಯಾವಾಗಲೂ ನಡೆದು ಬಂದ ಧರ್ಮವಾಗಿದೆ. ॥೮೦॥

---

೧ ಭ್ರಾಮಯೇದ್ ।

ಗುರುಗಳನ್ನು ಕಂಡರೆ ಮಾಡಬೇಕಾದ ಕ್ರಿಯೆ

ಗುರೂನ್ನಿರೀಕ್ಷ್ಯ ಸಹಸಾ ಸಮುತ್ಥಾಯ ನತಾನತೀ ೧ |
ಅನುಕೂಲಪ್ರವೃತ್ತಿಶ್ಚ ಸರ್ವಧರ್ಮಶಿರೋಮಣಿಃ ||೮೧||

ಅರ್ಥ :–ಗುರುಗಳನ್ನು ನೋಡಿ ತತ್ಕಾಲದಲ್ಲಿ ಎದ್ದು ನಿಂತು ತಲೆ ಬಗ್ಗಿಸಿ ನಮಸ್ಕರಿಸಬೇಕು. ಮತ್ತು ಗುರುಗಳಿಗೆ ಅನುಕೂಲವಾದ ಪ್ರವೃತ್ತಿಯು ಬೇಕು. ಅಂದರೆ ಗುರುಗಳನ್ನು ಅನುಸರಿಸಿ ಅವರ ಹಿಂದೆ ಹೋಗಬೇಕು. ಇದು ಎಲ್ಲ ಧರ್ಮ ಅಂದರೆ ಆಚಾರ ಧರ್ಮಕ್ಕೆ ಚೂಡಾಮಣಿಯಾಗಿದೆ. ||೮೧||

ಗುರುವು ಕೊಟ್ಟ ವಸ್ತುಗಳನ್ನು ಹೇಗೆ ಸ್ವೀಕರಿಸಬೇಕು ?

ಗುರುಣಾ ದೀಯಮಾನಾನಿ ವಸ್ತೂನಿ ಬಹುಭಾವನಃ |
ಪಾಣಿದ್ವಯೇನ ಸಂಗೃಹ್ಯ ಪುನಃಪ್ಯಭಿವಂದಯೇತ್ ||೮೨||

ಅರ್ಥ :– ಗುರುವಿನಿಂದ ಕೊಡಲ್ಪಡುತ್ತಿರುವ ವಸ್ತುಗಳನ್ನು ಬಹುಮಾನವುಳ್ಳವನಾಗಿ ಅಂದರೆ ಆದರ ಪೂರ್ವಕವಾಗಿ ಎರಡೂ ಕೈಗಳಿಂದ ತೆಗೆದುಕೊಂಡು ಮತ್ತೆಯೂ ಸಹ ಗುರುವಿಗೆ ನಮಸ್ಕರಿಸತಕ್ಕದ್ದು. ||೮೨||

ಧರ್ಮವೃದ್ಧಿಯ ಕಾರ್ಯವನ್ನು ಮುನಿಯು ಮಾಡಬೇಕು

ಯೇನ ಯೇನ ಹಿ ಕೃತ್ಯೇನ ಧರ್ಮವೃದ್ಧಿಃ ಪ್ರಜಾಯತೇ |
ತತ್ತತ್ಕುರ್ವನ್ ಯತಿರ್ಮಾನ್ಯೋ ಭವೇದತ್ರ ನ ಸಂಶಯಃ||೮೩||

ಅರ್ಥ :– ಯಾವ ಯಾವ ಕೃತ್ಯದಿಂದ ಧರ್ಮದ ಬೆಳವಣಿಗೆ ಆಗುತ್ತ

೧ ಸಮುತ್ಥಾನಂ ನತಾನತಿಃ |

ದೆಯೋ ಆಯಾ ಕಾರ್ಯವನ್ನು ಮಾಡುವ ಯತಿಯು ಈ ಲೋಕದಲ್ಲಿ ಮಾನ್ಯ ಅಂದರೆ ಸನ್ಮಾನ ಮಾಡಲು ಯೋಗ್ಯನಾಗುತ್ತಾನೆ ಈ ವಿಷಯದಲ್ಲಿ ಏನೂ. ಸಂಶಯವಿಲ್ಲ ೮೩॥

ಗುರುವೆಂದು ಯಾರು ಭಾವಿಸಲ್ಪಡುತ್ತಾನೆ ?

ಯೋ ಯೋ ಗುಣಾಧಿಕೋ ಮೂಲಗುಣ ೧ ಗಚ್ಛಾದ್ಯಲಂಕೃತಃ ।
ಸ ಸರ್ವೋऽ ಪ್ಯುಚ್ಯತೇ ೨ ಜೈನೈರ್ಗುರುರಿತ್ಯುಜ್ಝಿತಸ್ಮಯೈಃ ೩ ॥೮೪॥

ಅರ್ಥ :- ಯಾವ ಯಾವ ಯತಿಜನವು ಗುಣಗಳಿಂದ ಅಧಿಕವಾದದ್ದಾಗಿ ಮುನಿಯ ಇಪ್ಪತ್ತೆಂಟು ಮೂಲಗುಣ ಮತ್ತು ಮೂಲ ಸಂಘದ ಗಣ ಗಚ್ಛಾದಿಗಳಿಂದ ಅಲಂಕರಿಸಲ್ಪಟ್ಟದೆಯೋ ಆ ಎಲ್ಲ ಮುನಿಜನವು ಅಹಂಕಾರ ವನ್ನು ತ್ಯಾಗಮಾಡಿದ ಜೈನರಿಂದ ಗುರು ಎಂದು ಹೇಳಲ್ಪಡುತ್ತದೆ. ಅಂದರೆ ದೋಷವಿಲ್ಲದೆ ಮೂಲ ಗುಣಗಳನ್ನು ಪಾಲಿಸುತ್ತ ಮೂಲಸಂಘದ ಗಣಗಚ್ಛಾದಿಗಳನ್ನು ಹೊಂದಿ ತನ್ನ ವ್ರತದಲ್ಲಿ ದೃಢನಾದ ಮುನಿಗೆ ಗುರು ಎನ್ನುತ್ತಾರೆ. ॥೮೪॥

ಸಂಘ-ಗ್ರಂಥಗಳ ಅಭಿವೃದ್ಧಿಗಾಗಿ ಆಚಾರ್ಯನು
ಅಲ್ಪ ದ್ರವ್ಯವನ್ನು ಸ್ವೀಕರಿಸಬೇಕು

ಕ್ವಚಿತ್ಕಾಲಾನುಸಾರೇಣ ಸೂರಿರ್ದ್ರವ್ಯಮುಪಾಹರೇತ್ ।
ಸಂಘಪುಸ್ತಕವೃದ್ಧ್ಯರ್ಥಮಯಾಚಿತಮಥಾಲ್ಪಕಮ್ ॥೮೫॥

೧ ಮೂಲ ಗಣ । ೨ ಸ ಸರ್ವೈರುಚ್ಯತೇ । ೩ ಸ್ಮೃತೈಃ ।

ಅರ್ಥ :– ಆಚಾರ್ಯನು ಕೆಲವೆಡೆಯಲ್ಲಿ ಕಾಲಕ್ಕನುಸರಿಸಿ ಚತುರ್ವಿಧ ಸಂಘದ ಮತ್ತು ಶಾಸ್ತ್ರಗಳ ಬೆಳವಣಿಗೆಗಾಗಿ ಯಾಚನೆ ಇಲ್ಲದ್ದೂ ಮತ್ತು ಅಲ್ಪವೂ ಆದ ದ್ರವ್ಯವನ್ನು ತೆಗೆದುಕೊಳ್ಳತಕ್ಕದ್ದು. ಅಂದರೆ ಯಾರಾದರೂ ಶ್ರಾವಕರು ಪ್ರಸಂಗಾನುಸಾರವಾಗಿ ಸಂಘ ಮತ್ತು ಪುಸ್ತಕಗಳ ವೃದ್ಧಿಗಾಗಿ ಆಚಾರ್ಯರಿಗೆ ಹಣವನ್ನು ಕೊಟ್ಟರೆ ಅದನ್ನು ಅಲ್ಪರೂಪವಾಗಿ ಆಚಾರ್ಯರು ಸ್ವೀಕರಿಸಬೇಕು. ॥೮೫॥

ಪಾರ್ಶ್ವಸ್ಥ ವೃತ್ತಿಯನ್ನವಲಂಬಿಸಬಾರದು

ಪಾರ್ಶ್ವಸ್ಥವೃತ್ತಿಂ ೧ ವಾ ನೈವ ಲಂಬೇತಾಲಂಬನೋಜ್ಝಿತಃ ।
ನ ದೈನ್ಯಂ ದರ್ಶಯೇಲ್ಲೋಕೇ ಪ್ರಾಣತ್ಯಾಗೇಽಪಿ ಚಾತ್ಮನಃ॥೮೬॥

ಅರ್ಥ :– ನಿರಾಲಂಬನನಾದ ಮುನಿಯು ಪಾರ್ಶ್ವಸ್ಥ ವೃತ್ತಿಯನ್ನು ಆಶ್ರಯಿಸಬಾರದು. ಮತ್ತು ತನ್ನ ಪ್ರಾಣತ್ಯಾಗ–ಮರಣ ಪ್ರಾಪ್ತವಾದರೂ ಸಹ ಜನರಲ್ಲಿ ದೀನತೆಯನ್ನು ತೋರಿಸಬಾರದು. ಇಲ್ಲಿ 'ಪಾರ್ಶ್ವಸ್ಥ' ಎಂದರೆ ಯಾರು ದಿಗಂಬರ ಮುದ್ರೆಯನ್ನು ಧರಿಸಿಯೂ ಸಹ ರತ್ನತ್ರಯ ಧರ್ಮದಿಂದ ರಹಿತರೂ ಶರೀರಾದಿ ಬಾಹ್ಯ ಪದಾರ್ಥಗಳಲ್ಲಿ ಮೋಹಿಗಳಾದುದರಿಂದ ಇಂದ್ರಿಯ ಜಯವಿಲ್ಲದವರೂ ಆದ ಮುನಿಗಳಿಗೆ ಪಾರ್ಶ್ವಸ್ಥರೆಂದು ಹೇಳುತ್ತಾರೆ. ಇಂಥ ಭ್ರಷ್ಟಾಚಾರಿಗಳಾದ ಮುನಿಗಳ ವೃತ್ತಿಯನ್ನು ಎಂದೂ ಆಶ್ರಯಿಸಬಾರದು. ಮೋಹ ಉಂಟಾದರೆ ಯಾಚಕವೃತ್ತಿಯೂ ಉಂಟಾಗುತ್ತದೆ. ಇವೆಲ್ಲ ಮುನಿಧರ್ಮದ ಘಾತಕಗಳಾಗಿವೆ. ॥೮೬॥

ಯತಿಯ ಭೂಷಣ

ಕ್ಷುತ್ಕಾರ್ಶ್ಯಂ ಮಲಿನಾಂಗತ್ವಂ ಯತೇರ್ಭೂಷಣಮಂಜಸಾ ।
ನ ತೇನ ೨ ಲಜ್ಜತೇ ಯೋಗೀ ಪವಿತ್ರತರಮಾನಸಃ ॥೮೭॥

---

೧ ಪಾರ್ಶ್ವಸ್ಥವೃತ್ತಿಕಾಂ ನೈವ । ೨ ಕೇನ ।

ಅರ್ಥ :– ಹಸಿವೆಯಿಂದ ಉಂಟಾದ ಶರೀರದ ಕ್ಷೀಣತೆ, ಕೊಳಕಾದ ಅವಯವಗಳಿರುವಿಕೆ ಇವು ಯತಿಯ ನಿಜವಾದ ಭೂಷಣ ಅಂದರೆ ಅಲಂಕಾರ ಗಳು. ಅತ್ಯಂತ ಪರಿಶುದ್ಧವಾದ ಅಂತರಂಗವುಳ್ಳ ಯೋಗಿಯು ಆ ಶರೀರದ ಕೃಶತೆಯಿಂದಲೂ ಶರೀರದ ಮಲಿನತೆಯಿಂದಲೂ ನಾಚಿಕೆ ಪಡುವುದಿಲ್ಲ ||೬೭||

ಮನಸ್ಸಿನ ಶುದ್ಧತೆಯು ಮುಖ್ಯವಾಗಿದೆ

ಮನಃಶುದ್ಧಂ ಭವೇದ್ಯಸ್ಯ ಸ ಶುದ್ಧ ಇತಿ ಭಾಷ್ಯತೇ ೧ |
ವಿನಾ ತೇನ ಕೃತಸ್ನಾನಃ ಸ ಚ ೨ ನೈವ ವಿಶುದ್ಧ್ಯತಿ ||೮೮||

ಅರ್ಥ :– ಯಾವನ ಮನಸ್ಸು ರಾಗದ್ವೇಷಗಳಿಂದ ಹೀನವಾಗಿ ನಿರ್ಮಲವಾಗಿದೆಯೋ ಆತನು ಶುದ್ಧನೆಂದು ಹೇಳಲ್ಪಡುತ್ತಾನೆ. ಏಕೆಂದರೆ ಮಾನಸಿಕ ಶುದ್ಧತೆ ಇಲ್ಲದೆ ಸ್ನಾನ ಮಾಡಿದವನಾದರೂ ಆತನು ಶುದ್ಧಿಯನ್ನು ಹೊಂದುವುದೇ ಇಲ್ಲ. ಅಂದರೆ ಕೇವಲ ಬಾಹ್ಯಶುದ್ಧಿಯಿಂದಲೇ ಆತ್ಮನು ಶುದ್ಧನಾಗಲಾರನು. ಆದರೆ ಅಂತರಂಗ ಶುದ್ಧಿಯು ಅವಶ್ಯಬೇಕು. ಅದಕ್ಕಾಗಿ ಯಾವಾಗಲೂ ಪ್ರಯತ್ನಶೀಲನಾಗಿರಬೇಕು. ||೮೮||

ಧರ್ಮಬೋಧಕನ ಲಕ್ಷಣ

ಕಾರ್ಯಾಕಾರ್ಯವಿಚಾರಜ್ಞಸ್ಸರ್ವಭಾವವಿಶಾರದಃ |
ಸರ್ವಶಾಸ್ತ್ರಾರ್ಥವಿತ್ ಸಾಧುರ್ಧರ್ಮಸ್ಯ ಪ್ರತಿಪಾದಕಃ ||೮೯||

ಅರ್ಥ :– ಮಾಡಲು ಯೋಗ್ಯವಾದ ಮತ್ತು ಮಾಡಲು ಅಯೋಗ್ಯವಾದ ಕಾರ್ಯಗಳ ವಿಚಾರವನ್ನು ತಿಳಿದವನೂ, ಎಲ್ಲ ಪದಾರ್ಥಗಳಲ್ಲಿ ವಿಶಾರದನೂ ಅಥವಾ 'ಸರ್ವಭಾಷಾವಿಶಾರದಃ' ಎಂತಲೂ ಪಾಠಭೇದ ಉಂಟು. ಆದರಿಂದ ಎಲ್ಲ ಭಾಷೆಗಳಲ್ಲಿ ಪಂಡಿತನೂ, ಎಲ್ಲ ಶಾಸ್ತ್ರಗಳ ಅರ್ಥವನ್ನು ಬಲ್ಲ

೧ ಪಠ್ಯತೇ | ೨ ಕೃತಸ್ನಾನೋಽಪ್ಯಂಗೀ

ವನೂ ಆದ ಸಾಧುವು ಧರ್ಮದ ಪ್ರತಿಪಾದಕನಾಗುತ್ತಾನೆ—ಧರ್ಮಬೋಧಕ ನಾಗುತ್ತಾನೆ. ಧರ್ಮಬೋಧಕನಲ್ಲಿ ಹೇಯಾದೇಯ ವಿಚಾರವೂ ಸರ್ವಭಾಷೆ ಗಳಲ್ಲಿ ಪಾಂಡಿತ್ಯವೂ ಶಾಸ್ತ್ರಾರ್ಥವನ್ನು ಸರಿಯಾಗಿಬಲ್ಲವನೂ ಇರಬೇಕು. ॥೮೯॥

ಶ್ರಾವಕನು ಸರ್ವಕಾಲದಲ್ಲೂ ಮಾನ್ಯನು

ಸಗುಣೋ ವಾ ನಿರ್ಗುಣೋ ವಾ[೧] ಶ್ರಾವಕೋ ಮಾನ್ಯತೇ [೨] ಸದಾ।
ನಾವಜ್ಞಾ ಕ್ರಿಯತೇ ತಸ್ಯ ತನ್ಮೂಲಾ ಧರ್ಮವರ್ತನಾ ॥೯೦॥

ಅರ್ಥಃ– ಶ್ರಾವಕನು ಗುಣವಂತನೇ ಇರಲಿ ಅಥವಾ ಗುಣವಿಲ್ಲದವನೇ ಇರಲಿ ಆತನು ಯಾವಾಗಲೂ ಮಾನಿಸಲ್ಪಡುತ್ತಾನೆ. ಆತನ ತಿರಸ್ಕಾರವು ಮಾಡಲ್ಪಡುವುದಿಲ್ಲ. ಏಕೆಂದರೆ ಆತನ ಕಾರಣದಿಂದಲೇ ಧರ್ಮದ ಸಂಚಾಲ ನವು ಇದೆ. ಅಂದರೆ ಮುನಿಧರ್ಮದ ಪ್ರವೃತ್ತಿಯು ಶ್ರಾವಕರಿದ್ದರೇನೇ ನಡೆಯು ತ್ತಿರುವುದರಿಂದ 'ತನ್ಮೂಲಾ ಧರ್ಮವರ್ತನಾ' ಎಂದು ಹೇಳಿದ್ದಾರೆ. ಶ್ರಾವ ಕರು ಚತುರ್ವಿಧ ದಾನವನ್ನು ಆಚರಿಸಿ ಮುನಿಧರ್ಮವನ್ನು ರಕ್ಷಿಸುತ್ತಾರೆ ಇಲ್ಲದಿದ್ದರೆ ಮುನಿಧರ್ಮದ ಪ್ರವರ್ತನೆಯು ದುರ್ಲಭವಾಗುವುದು, ಆದುದರಿಂದ ಶ್ರಾವಕನು ಎಲ್ಲರಿಂದಲೂ ಮಾನ್ಯನಾಗಿರುತ್ತಾನೆ. ॥೯೦॥

ಜೈನಾಭಾಸ ಸಂಘದ ಭಕ್ತರೂ ಸಹ ಆಹಾರದಾನಾದಿ ಗಳನ್ನು ಮಾಡಬಹುದು.

ವಿಸಂಘಭಕ್ತಾ ಭಕ್ತ್ಯಾ ಚೇದನ್ನಂ ದಿತ್ಸಂತಿ ಯೋಗಿನೇ।
ಭಾಂಡಭಾಜನಶುದ್ಧಿಶ್ಚೇನ್ನ ನಿಷೇಧೋಽಸ್ತಿ ಕಶ್ಚನ ॥೯೧॥

ಅರ್ಥಃ– ಅನ್ಯಸಂಘದ ಅಂದರೆ ಜೈನಾಭಾಸ ಸಂಘದ ಭಕ್ತರು ಭಕ್ತಿ ಯಿಂದ ಯೋಗಿಗೆ ಅನ್ನವನ್ನು ಕೊಡಲು ಇಚ್ಛಿಸುತ್ತಾರಾದರೆ–ಮಡಕೆ–ಪಾತ್ರೆ ಗಳ ಶುದ್ಧಿ ಇದ್ದುದಾದರೆ ಯಾವ ನಿಷೇಧವಿರುವುದಿಲ್ಲ. ಮೂಲ ಸಂಘದವರಲ್ಲದ

೧ ಸಗುಣೋ ನಿರ್ಗುಣೋ ವಾಪಿ। ೨ ಮನ್ಯತೇ।

ಮುನಿಭಕ್ತರಾದ ಶ್ರಾವಕರೂ ಸಹ ಮುನಿಗೆ ಆಹಾರಾದಿಗಳನ್ನು ಕೊಡಬಹುದು, ಅದಕ್ಕೇನೂ ಅಡ್ಡಿಯಿಲ್ಲ. ||೯೧||

ಮುನಿಯು ನಿಂದಕರ ಆಹಾರವನ್ನು ಗ್ರಹಿಸಬಾರದು

ಭಾಂಡಭಾಜನಶುದ್ಧೋಽಪಿ ಪಾಷಂಡೀ ಯೋ ವಿನಿಂದಕಃ ।
ಯದಿ ತತ್ರ ನ ಭೋಕ್ತವ್ಯಂ ತದನ್ನಂ ಪಾಪಮುಚ್ಯತೇ ॥೯೨॥

ಅರ್ಥ :- ಯಾವನು ಮಡಿಕೆ ಪಾತ್ರೆಗಳಿಂದ ಶುದ್ಧನಾದಾಗ್ಯೂ ಪಾಖಂಡಿಯೂ (ಧರ್ಮವನ್ನು) ನಿಂದಿಸುವವನೂ ಇದ್ದುದಾದರೆ ಅಲ್ಲಿ ಅಂದರೆ ಅಂಥ ಭಕ್ತನಲ್ಲಿ ಮುನಿಯು ಭೋಜನ ಮಾಡಕೂಡದು. ಏಕೆಂದರೆ ಅತನ ಅನ್ನವು ಪಾಪಾನ್ನವೆಂದು ಹೇಳಲ್ಪಡುತ್ತದೆ. ದಾತೃವು ನಿಂದಿಸುವವನೂ, ಪಾಖಂಡಿಯೂ ಇದ್ದುದಾದರೆ ಅವರ ಮನೆಯಲ್ಲಿ ಮುನಿಯು ಭೋಜನ ಮಾಡಬಾರದು. ||೯೨||

ಯೋಗಿಯು ಸ್ತ್ರೀಯನ್ನು ಮುಟ್ಟಬಾರದು

ನ ಯೋಷಿತಃ ಸ್ಪೃಶೇದ್ಯೋಗೀ ಕಾಷ್ಠಚಿತ್ರಗತಾ [೧] ಅಪಿ ।
ಕಿಂ ಪುನಃ ಸ್ಪರ್ಶನಂ ತಾಸಾಂ ಯಾಸಾಂ ಸ್ಮರಣಮಾಪದೇ॥೯೩॥

ಅರ್ಥ :- ಯೋಗಿಯು ಮರದಲ್ಲಿರುವ ಚಿತ್ರದಲ್ಲಿರುವ ಸ್ತ್ರೀಯರನ್ನೂ ಸಹ ಮುಟ್ಟಬಾರದು. ಯಾವ ಹೆಂಗಸರ ನೆನೆಯುವಿಕೆಯೂ ಕೂಡ ಸಂಕಟಕ್ಕೆ ಕಾರಣವಾಗಿದೆಂದ ಮೇಲೆ ಅವರ ಸಾಕ್ಷಾತ್ ಸ್ಪರ್ಶನಕ್ಕೆ ಮಂತ್ರೇನು ಹೇಳಬೇಕು. ಸ್ತ್ರೀಯರ ಗೊಂಬೆ ಚಿತ್ರಗಳೂ ಸಹ ಮುನಿಗೆ ಸ್ಪರ್ಶಮಾಡಲು ಯೋಗ್ಯವಲ್ಲ ಮತ್ತು ಅವರ ನೆನಪೂ ಸಹ ದುಃಖದಾಯಕವೆಂದ ಮೇಲೆ

[೧] ಕಾಷ್ಠಚಿತ್ರೋದ್ಗತಾಃ ।

ಅವರ ಸ್ಪರ್ಶವಂತೂ ಎಷ್ಟು ದುಃಖದಾಯಕವಿದೆಂಬುದನ್ನು ಬೇರೆ ಹೇಳ ಬೇಕಾಗಿಲ್ಲ. ||೯೨||

ಬೆಳ್ಳಿ ಚಿನ್ನ ಗಂಧ ವಸ್ತ್ರಾದಿಗಳನ್ನು ಯೋಗಿಯು ಮುಟ್ಟುವುದಿಲ್ಲ

ಪಂಚಚೇಲವಿನಿರ್ಮುಕ್ತಾ ಗಂಧಮುಕ್ತಾಃ[೧] ಸತಾಂಮತಾಃ ।
ನ ತೇ ಸುವರ್ಣರೂಪ್ಯಾದಿ ಸ್ಪೃಶಂತಿ ಗುರುಸಂಯಮಾಃ ॥೯೪॥

ಅರ್ಥ :- ಮಹಾಸಂಯಮ—ಮಹಾವ್ರತಗಳನ್ನು ಧರಿಸಿದಂಥವರೂ ಹತ್ತಿ, ಚರ್ಮ, ಉಣ್ಣೆ, ವಲ್ಕಲ ಮತ್ತು ಮರದ ಎಲೆ ತೊಗಟೆ ಹುಲ್ಲುಗಳಿಂದ ತಯಾರಾದ ಐದು ಪ್ರಕಾರ ಬಟ್ಟೆಗಳಿಂದ ಬಿಡಲ್ಪಟ್ಟವರೂ ಮತ್ತು ಗಂಧವನ್ನು ಬಿಟ್ಟವರೂ ಅಥವಾ ದಂಡಮುಕ್ತಾ: ಅಂದರೆ ಅನರ್ಥಕಾರಿ ಮನವಚನ ಕಾಯುಗಳ ಪ್ರವೃತ್ತಿಇಲ್ಲದವರೂ ಸತ್ಪುರುಷರಲ್ಲಿ ಮಾನ್ಯರೂ ಆದ ಆ ಯೋಗಿಗಳು ಬಂಗಾರ ಬೆಳ್ಳಿ ವಸ್ತ್ರ ವೊದಲಾದವುಗಳನ್ನು ಸ್ಪರ್ಶಿಸುವುದಿಲ್ಲ. ಅಂದರೆ ಸಂಗವನ್ನು ತ್ಯಾಗಮಾಡಿದ ಮುನಿಜನರು ತಮ್ಮ ಸಂಯಮದಲ್ಲಿ ದೃಢರಾಗಿದ್ದುದರಿಂದ ಮತ್ತೆ ಆ ಬಾಹ್ಯವಸ್ತುಗಳಲ್ಲಿ ಮೋಹಿಗಳಾಗುವುದಿಲ್ಲ. ||೯೪||

ಯತಿಗಳು ಏನೇನು ಮಾಡುವುದಿಲ್ಲ ?

ಮುಖಶುದ್ಧಿಂ ನ ಕುರ್ವಂತಿ[೨] ನೋಪವಿಶ್ಯ ಚ ಭೋಜನಮ್।
ಸಂಘೇನ ಸಹ ಕುರ್ವಂತಿ ನಾಪೇಕ್ಷಂತೇ ಚ ಕಿಂಚನ ॥೯೫॥

ಅರ್ಥ :- ಯತಿಗಳು ಮುಖಶುದ್ಧಿಯನ್ನು ದಂತಧಾವನಾದಿಗಳಿಂದ ಮುಖತೊಳೆಯೋಣವನ್ನು ಮಾಡುವುದಿಲ್ಲ, ಕೂತುಕೊಂಡು ಮತ್ತು ಸಂಘದೊಡನೆ ಭೋಜನವನ್ನು ಮಾಡುವುದಿಲ್ಲ, ನಿಂತುಕೊಂಡು ಒಬ್ಬರೇ ಭೋಜನ ಮಾಡುತ್ತಾರೆ ಎಂದು ಭಾವವು. ಮತ್ತು ಯಾರಿಂದಲೂ ಏನನ್ನೂ ಅಪೇಕ್ಷಿಸು

[೧] ದಂಡಮುಕ್ತಾಃ । [೨] ಗೃಹ್ಣಂತಿ

ವುದಿಲ್ಲ. ನಿರ್ಮೋಹಿಗಳಾದುದರಿಂದ ಯಾವುದೇ ಬಾಹ್ಯ ವಸ್ತುವನ್ನು ಬಯಸುವುದಿಲ್ಲ ಎಂದು ಅಭಿಪ್ರಾಯವು. ||೯೫||

ಹೆಣ್ಣಿನ ಚಿತ್ರವನ್ನೂ ಸಹ ಮುಟ್ಟಬಾರದು

ಚಿತ್ರಸ್ಥಾಮಪಿ ಸಂಸ್ಪೃಶ್ಯ ಯೋಷಿತಂ ನೈವ ಭುಂಜತೇ ।
ತಸ್ಮಿನ್ನಹನಿ ಭೋಕ್ತಾ ಚೇದ್ಯತಿಃ ಸ್ಯಾತ್ಪಾಪಭಾಜನಃ[೧] ||೯೬||

ಅರ್ಥ :- ಯತಿಗಳು ಚಿತ್ರಪಟದಲ್ಲಿರುವ ಹೆಣ್ಣನ್ನೂ ಸಹ (ಅನುರಾಗ ಬುದ್ಧಿಯಿಂದ) ಮುಟ್ಟಿ ಆ ದಿನ ಭೋಜನವನ್ನು ಮಾಡುವುದೇ ಇಲ್ಲ. ಯತಿಯು ಆ ದಿನ ಭೋಜನ ಮಾಡುವವನಾದ ಪಕ್ಷದಲ್ಲಿ ಪಾಪಕರ್ಮಕ್ಕೆ ಪಾತ್ರನಾಗುತ್ತಾನೆ ಸ್ತ್ರೀ ಚಿತ್ರವನ್ನೂ ಸಹ ಮುಟ್ಟಿದರೆ ಆದಿನ ಉಪವಾಸ ಅವಶ್ಯ ಮಾಡಬೇಕು. ||೯೬||

ಮುನಿಯು ಬ್ರಹ್ಮಚರ್ಯವನ್ನು ಧರಿಸಬೇಕು

ಪಾಷಂಡಾ ಯೇಽತ್ರ[೨] ಸಂಜಾತಾ ಜಿಹ್ವೋಪಸ್ಥಾದಿಲಂಪಟಾಃ[೩] ।
ತೇ ಸರ್ವೇ ಪಾಪಿನಸ್ತ[೪]ಸ್ಮಾದ್ಬ್ರಹ್ಮಚರ್ಯಂ ಧರೇನ್ಮುನಿಃ ||೯೭||

ಅರ್ಥ :- ಈ ಲೋಕದಲ್ಲಿ ಯಾವ ಪಾಖಂಡ ಸಾಧುಗಳು ನಾಲಗೆ ಯೋನಿ ಮೋಹನಾದಿಗಳಲ್ಲಿ ಲಂಪಟರಾಗಿದ್ದಾರೆಯೋ ಅವರೆಲ್ಲ ಪಾಪಿಗಳು. ಆದುದರಿಂದ ಮುನಿಯು ಬ್ರಹ್ಮಚರ್ಯವನ್ನು ಧರಿಸಬೇಕು. ನಾಲಗೆ ಮತ್ತು ಸ್ಪರ್ಶನೇಂದ್ರಿಯಗಳಲ್ಲಿ ಲಂಪಟರಾದವರು ನಿಜವಾದ ಮುನಿಗಳಲ್ಲ. ಆದರೆ ಪಾಪಿಗಳೆಂದು ಹೇಳಲ್ಪಡುತ್ತಾರೆ. ಆದುದರಿಂದ ಜ್ಞಾನಿಯಾದ ಮುನಿಯು ಬ್ರಹ್ಮಚರ್ಯವನ್ನು ಅವಶ್ಯ ಪಾಲಿಸಬೇಕು. ಅದರ ಹೊರತು ಮುನಿ ಎಂದು ತಿಳಿಸಿಕೊಳ್ಳಲು ಅಪಾತ್ರನು. ||೯೭||

---

೧ ಭುಕ್ತ್ವಾ ಚೇತ್ ಸ್ಪೃಷ್ಟಿಃ ಸ್ಯಾತ್ಪಾಪವಧಿಕಾ । ೨ ಯಂತ್ರ ।
೩ ಜಿಹ್ವೋಪಸ್ಥಾದಿದಂಡಿತಾಃ । ೪ ತೇ ಸರ್ವೇಽಪ್ಯನಘಂ ।

ಯಾರನ್ನು ಸಂಘದಿಂದ ಬಹಿಷ್ಕರಿಸಬೇಕು ?

ಸಂಘಾಪಕಾರಿಣಂ ಮೂಢಂ ಸಂಘಬಾಹ್ಯಂ ಪ್ರಕಲ್ಪಯೇತ್ ।
೧ ಅಹಿದಷ್ಟಾಂಗುಲಿಃ ಪುಂಸಸ್ಸರ್ವನಾಶಾಯ ಜಾಯತೇ ॥೯೮॥

ಅರ್ಥ :- ಸಂಘಕ್ಕೆ ಅಪಕಾರಿಯಾದ ಮೂರ್ಖ ಮುನಿಯನ್ನು ಸಂಘ ಬಾಹ್ಯನನ್ನಾಗಿ ಮಾಡಬೇಕು. ಅಂದರೆ ಸಂಘದಿಂದ ಹೊರಗೆ ಹಾಕಬೇಕು. ಅದಕ್ಕೊಂದು ದೃಷ್ಟಾಂತವನ್ನು ಹೇಳುತ್ತಾರೆ-ಹಾವಿನಿಂದ ಕಚ್ಚಲ್ಪಟ್ಟ ಬೆರಳು ಪುರುಷನ ಸರ್ವನಾಶಕ್ಕೆ ಕಾರಣವಾಗುತ್ತದೆ. ಆದಕ್ಕಾಗಿ ತತ್ಕಾಲ ಅಷ್ಟೇ ಬೆರಳನ್ನು ಶರೀರದಿಂದ ಬೇರ್ಪಡಿಸಿದರೆ ಹಾವಿನ ವಿಷವು ಮನುಷ್ಯನ ಶರೀರ ವನ್ನು ವ್ಯಾಪಿಸುವುದಿಲ್ಲ ಆತನ ರಕ್ಷಣೆಯಾಗುತ್ತದೆ. ಅದರಂತೆ ಒಬ್ಬ ಅಪಕಾರಿಯಾದ ಮೂಢನನ್ನು ಸಂಘದಿಂದ ಹೊರಗೆ ಹಾಕಿದರೆ ಸಂಘವೆಲ್ಲ ಸುರಕ್ಷಿತವಾಗಿ ಉಳಿಯುವುದು. ।।೯೮।।

ಸಮ್ಯಗ್ದರ್ಶನವನ್ನು ಅವಶ್ಯ ಕಾಪಾಡಬೇಕು.

ಸಮ್ಯಗ್ದರ್ಶನಶುದ್ಧಾನಾಂ ತಪಸಾಲ್ಪೇನ ಜಾಯತೇ ।
ಕರ್ಮಕ್ಷಯಸ್ತತೋ ನೂನಂ ತದೇವ ಪರಿಪಾಲಯೇತ್೨ ॥೯೯॥

ಅರ್ಥ :- ಸಮ್ಯಗ್ದರ್ಶನದಿಂದ ಪವಿತ್ರರಾದವರ ಅಲ್ಪ ತಪಸ್ಸಿನಿಂದಲೇ ಕರ್ಮಗಳ ನಾಶವಾಗುತ್ತದೆ. ಅದುದರಿಂದ ನಿಶ್ಚಯವಾಗಿ ಆ ಸಮ್ಯಗ್ದರ್ಶನವನ್ನೇ ರಕ್ಷಿಸಬೇಕು. ।।೯೯।।

ಸಮ್ಯಗ್ದರ್ಶನದ ಹೊರತಾಗಿ ಮುಕ್ತಿಯಿಲ್ಲ

೧ ಅಹಿದಷ್ಟಾಂಗುಲಿರ್ವಾಸೌ । ೨ ಪ್ರತಿಪಾಲಯೇತ್ ।

ಸಮ್ಯಕ್ತ್ವಮೂಲಂ ಸರ್ವಂ ಸ್ಯಾದ್ ಜ್ಞಾನಂ ಚಾರಿತ್ರಮೇವ ವಾ ।
ವಿನಾ ತೇನಾಪರೇ ನೈವ ಕುರ್ಯಾಸ್ತಾಂ೧ ಮೋಕ್ಷಸಾಧನಮ್
||೧೦೦||

ಅರ್ಥ :- ಸಮಸ್ತ ಜ್ಞಾನವಾಗಲಿ ಅಥವಾ ಚಾರಿತ್ರವಾಗಲಿ ಸಮ್ಯಗ್ದರ್ಶನವೇ ಬುಡವಾದದ್ದು ಆಗಿರುತ್ತದೆ. ಆ ಸಮ್ಯಕ್ತ್ವದ ಹೊರತಾಗಿ ಇನ್ನುಳಿದ ಜ್ಞಾನ ಚಾರಿತ್ರಗಳೆರಡೂ ಮೋಕ್ಷ ಸಾಧನವನ್ನು ಮಾಡಲಾರವು. ಅಂದರೆ ಸಮ್ಯಗ್ದರ್ಶನವಿಲ್ಲದೆ ಜ್ಞಾನಚಾರಿತ್ರಗಳು ಕರ್ಮಕ್ಷಯಕ್ಕೆ ಸಮರ್ಥಗಳಾಗಲಾರವು ಆದುದರಿಂದ ಸಮ್ಯಕ್ತ್ವದ ಹೊರತಾಗಿ ಮುಕ್ತಿಯಿಲ್ಲವೆಂದು ಹೇಳಿದ್ದಾರೆ. ಮೋಕ್ಷಮಾರ್ಗದಲ್ಲಿ ಈ ಮೂರೂ ಬೇಕೇಬೇಕು. ||೧೦೦||

ಪ್ರತಿಕ್ರಮಣಾದಿಗಳಿಗೆ ತಿಥಿನಿಯಮವನ್ನು ಹೇಳುತ್ತಾರೆ

ಪ್ರತಿಕ್ರಮಾದಿವೇಲಾಯಾಂ ಯದಿ ಪ್ರಾಪ್ಯೇತ ತತ್ತ್ವತಃ ।
ಚತುರ್ದಶ್ಯಷ್ಟಮೀ ವಾ ನೈ ತದಾ ಸಾ ತಿಥಿರುಚ್ಯತೇ೨ ||೧೦೧||

ಪ್ರತಿಕ್ರಮಣ ಉಪವಾಸಾದಿಗಳ ವೇಳೆಯಲ್ಲಿ ಚತುರ್ದಶಿ ಅಥವಾ ಅಷ್ಟಮೀ ತಿಥಿಯು ಪಡೆಯಲ್ಪಟ್ಟುದಾದರೆ ಯಥಾರ್ಥವಾಗಿ ಆ ವೇಳೆಯಲ್ಲಿ ಆ ತಿಥಿಯು ಹೇಳಲ್ಪಡುತ್ತದೆ ಅಂದರೆ ಅಷ್ಟಮೀ ಚತುರ್ದಶಿಗಳ ಸದ್ಭಾವದಲ್ಲಿ ಪ್ರತಿಕ್ರಮಣಾದಿ ಕ್ರಿಯೆಗಳನ್ನು ಆಚರಿಸಬೇಕು. ||೧೦೧||

ಪ್ರತಿಕ್ರಮಣಾದಿಗಳಿಗೆ ಹೆಚ್ಚು ತಿಥಿಯು ಗ್ರಾಹ್ಯವಾಗಿದೆ

ಯದ್ಯದ್ಬಹುತರಂ ತತ್ತತ್ಸರ್ವತ್ರ ಬಲವದ್ಯಥಾ ।
ತಥಾ ಚ ತತ್ತಿಥಿರ್ಮುಖ್ಯಾ ಬಹೂನಾಮಪಿ ಸಂಗಮೇ೩ ||೧೦೨||

ಅರ್ಥ :- ಹೇಗೆ ಯಾವುದು ಯಾವುದು ಅತ್ಯಂತವಾಗಿ ಹೆಚ್ಚಾದದ್ದೊ

೧ ಕುರ್ಯಾತಾಂ । ೨ ಸೈವ ಪ್ರಶಸ್ಯತೇ ।
೩ ತಥಾ ಚತುರ್ದಶೀ ಮುಖ್ಯಾ ತಿಥೀನಾಮಪಿ ಸಂಗಮಃ ।

ಎಲ್ಲ ಕಡೆಗೂ ಅದು ಬಲವಾದದ್ದಾಗಿ ಮನ್ನಿಸಲ್ಪಡುತ್ತದೆ. ಹಾಗೆಯೇ ಅನೇಕ ತಿಥಿಗಳ ಸಂಗಮದಲ್ಲಿಯೂ ಕೂಡ ಅತ್ಯಂತ ಹೆಚ್ಚಾದ ತಿಥಿಯು ಆ ದಿನ ಮುಖ್ಯವೆಂದು ಮನ್ನಿಸಲ್ಪಡುತ್ತದೆ. ಆದುದರಿಂದ ಅಷ್ಟಮಿ ಚತುರ್ದಶಿಗಳನ್ನು ಹೆಚ್ಚು ಕಾಲವಿರುವ ದಿವಸದಲ್ಲೇ ಪಾಲಿಸಬೇಕು. ౹౦೨॥

ಧರ್ಮಕಾರ್ಯಗಳಲ್ಲಿ ಅಧಿಕ ತಿಥಿಯೇ ಸಮ್ಮತವಾಗಿದೆ

ಅಧಿಕಾ ತಿಥಿರಾದಿಷ್ಟಾ ಧರ್ಮಕಾರ್ಯೇಷು ಸತ್ತಮಾ ।
ಆದಿಮಧ್ಯಾಂತಭೇದೇನ ಶಕ್ತೇಸ್ತಸ್ಯಾಪಿ ೧ ಹೀಯತೇ ॥೧೦೩॥

ಅರ್ಥ :– ಧರ್ಮಕಾರ್ಯಗಳಲ್ಲಿ ಹೆಚ್ಚು ಕಾಲವುಳ್ಳ ತಿಥಿಯು ಅತಿ ಶ್ರೇಷ್ಠವೆಂದು ಹೇಳಲ್ಪಟ್ಟಿದೆ. ಆ ಪ್ರತಿಕ್ರಮಣದ ಆದಿ ಕಾಲ, ಮಧ್ಯಕಾಲ ಮತ್ತು ಅಂತ ಕಾಲದ ಭೇದದಿಂದಲೂ, ಘಳಿಗೆಗಳ ಶಕ್ತಿಯುದೆಸೆಯಿಂದಲೂ ಆ ತಿಥಿಯು ಹೀನವಾಗುತ್ತಿದೆ. ಅಂದರೆ ತಿಥಿಯ ಪ್ರಾರಂಭ ಕಾಲಕ್ಕಿಂತಲೂ ಮಧ್ಯಕಾಲವು ಹೀನವಾಗಿರುತ್ತದೆ. ಮಧ್ಯ ಕಾಲಕ್ಕಿಂತಲೂ ಅಂತ್ಯ ಕಾಲವು ಹೀನವೆಂದು ಹೇಳಲ್ಪಡುತ್ತದೆ. ಪೂರ್ವ ಭಾಗಕ್ಕೆ ಶಕ್ತಿಹೆಚ್ಚೆಂದು ಅಭಿಪ್ರಾಯವು. ॥೧೦೩॥

ಪಂಚಕಲ್ಯಾಣಾದಿ ಉತ್ಸವಗಳಲ್ಲಿ ತಿಥಿಯೇ ಮುಖ್ಯವಾದುದು

ಜಿನಜನ್ಮಾದಿಕಾಸ್ಸರ್ವಾಃ ಕ್ರಿಯಾ ಮಾಸತಿಥಿಪ್ರಮಾಃ ।
ನಕ್ಷತ್ರಯೋಗಕರಣಂ ನ ಪ್ರಮಾಣಂ ೨ ಯತಶ್ಚಲಮ್ ॥೧೦೪॥

ಅರ್ಥ :– ತೀರ್ಥಂಕರರ ಜನ್ಮಕಲ್ಯಾಣಾದಿ ಪಂಚಕಲ್ಯಾಣಗಳ ಎಲ್ಲ ಕ್ರಿಯೆಗಳು ತಿಂಗಳು ಮತ್ತು ತಿಥಿಗಳೇ ಪ್ರಮಾಣವುಳ್ಳವುಗಳಾಗುತ್ತವೆ. ಆಯಾ

೧ ಶಕ್ತಿತಶ್ಚಾಪಿ । ೨ ನ ಪ್ರಧಾನಂ ।

ತಿಂಗಳದ ತಿಥಿಗಳನ್ನೇ ಜನ್ಮಕಲ್ಯಾಣಾದಿ ಕ್ರಿಯೆಗಳಲ್ಲಿ ಪ್ರಮಾಣವೆಂದು ತಿಳಿಯಬೇಕು. ನಕ್ಷತ್ರ ಯೋಗ ಕರಣ ಇವುಗಳು ಪ್ರಮಾಣವಾಗಿಲ್ಲ. ಏಕೆಂದರೆ ಅವು ಚಂಚಲವಾಗಿರುತ್ತವೆ. ||೧೦೪||

ಯತಿಗಳು ಮಾಡುವ ಕ್ರಿಯೆಗಳಿಗೆ ಕಾಲ
ಪರಿಮಾಣವನ್ನು ಹೇಳುತ್ತಾರೆ

ಘಟೀಚತುಷ್ಟಯೇ ರಾತ್ರೇಃ ಕುರ್ಯಾತ್ಪೂರ್ವಾಹ್ಣವಂದನಾಮ್ ।
ಮಧ್ಯಾಹ್ನಸ್ಯಾಪಿ ನಿಯಮೋ ನಾಡೀದ್ವಯಮುದಾಹೃತಮ್ ||೧೦೫||

ಅರ್ಥ :– ರಾತ್ರಿಯ ನಾಲ್ಕು ಗಳಿಗೆಗಳಿರುವಾಗ ಪೂರ್ವಾಹ್ಣವಂದನಾ ಅಂದರೆ ಪ್ರಾತಃಕಾಲದ ವಂದನಾ ಕ್ರಿಯೆಯನ್ನು ಮಾಡತಕ್ಕದ್ದು. ಮಧ್ಯಾಹ್ನದ ನಿಯಮದಲ್ಲಿ ಎರಡುನಾಡಿ ಅಂದರೆ ಒಂದು ಮುಹೂರ್ತ ಕಾಲವು ಹೇಳಲ್ಪಟ್ಟಿದೆ. ||೧೦೫||

ಅಪರಾಹ್ಣೇ ತು ನಾಡೀನಾಂ ಚತುಷ್ಟಯ್ಯಾಂ ಸಮಾಹಿತಃ ।
ನಕ್ಷತ್ರದರ್ಶನಾನ್ಮುಂಚೇತ್ಸಾಮಾಯಿಕಪರಿಗ್ರಹಮ್ ||೧೦೬||

ಅರ್ಥ :– ಸಾಯಂಕಾಲದಲ್ಲಾದರೋ ನಾಲ್ಕುನಾಡಿಗಳಲ್ಲಿ ಏಕಾಗ್ರಚಿತ್ತನಾಗಿ ವಂದನೆಯನ್ನು ಮಾಡಬೇಕು. ನಕ್ಷತ್ರಗಳ ದರ್ಶನದದೆಸೆಯಿಂದ ಸಾಮಾಯಿಕ ಸ್ವೀಕಾರವನ್ನು ಬಿಡತಕ್ಕದ್ದು. ||೧೦೬||

ತಿಥಿಗನುಸಾರ ಕ್ರಿಯೆಗಳನ್ನು ಮಾಡಬೇಕು.

ಯಾ ಕ್ರಿಯಾ ಕ್ರಿಯತೇ ಯತ್ರ ತಿಥೌ ಸಾ ತತ್ರ ಸಮ್ಮತಾ ।
ಅನಾಗತೇ ಹ್ಯತೀತೇ ಚ ತಸ್ಮಿನ್ನಾಡೀದ್ವಯಂ ಮತಮ್ ||೧೦೭||

ಅರ್ಥ :– ಯಾವ ತಿಥಿಯಲ್ಲಿ ಯಾವ ಕ್ರಿಯೆಯು ಮಾಡಲ್ಪಡುತ್ತದೆಯೋ ಆ ತಿಥಿಯಲ್ಲಿ ಆ ಕ್ರಿಯೆಯು ನಡೆಬಡಲ್ಪಟ್ಟಿದೆ. ಆ ತಿಥಿಯು ಬರುವುದಕ್ಕಿಂತ ಮುಂಚೆಯೂ ಕಳೆದ ಮೇಲೆಯೂ ಎರಡು ನಾಡಿ ಅಂಗೀಕರಿಸಬಹುದೆಂದು ಹೇಳಲ್ಪಟ್ಟಿದೆ.

ಅನಧ್ಯಯನ ಕಾಲ

ಸಿದ್ಧಾಂತೇ ವಾಚ್ಯಮಾನೇ ಸ್ಯಾದ್ಯದಿ ಮೇಘಸ್ಯ ಗರ್ಜನಮ್ ।

ವಿದ್ಯುತೋ ದರ್ಶನಂ ವಾಪಿ ತದಾನಧ್ಯಯನಂ ಮತಮ್[೧]॥೧೦೮॥

ಅರ್ಥ :– ಸಿದ್ಧಾಂತವು ಓದಲ್ಪಡುತ್ತಿರಲು ಗುಡುಗು ಅಥವಾ ಮಿಂಚಿನ ದರ್ಶನವು ಆದದ್ದಾದರೆ ಆ ಕಾಲದಲ್ಲಿ ಸಿದ್ಧಾಂತ ಗ್ರಂಥದ ಓದದೆ ಇರೋಣವು ಸಮ್ಮತವಾಗಿದೆ. ಅಂದರೆ ಗುಡುಗು ಸಿಡಿಲು ಮಿಂಚುಗಳು ಆಗುವಾಗ ಸಿದ್ಧಾಂತವನ್ನು ಸ್ವಾಧ್ಯಾಯ ಮಾಡಬಾರದು. ಅದು ಅಧ್ಯಯನ ಕಾಲವಲ್ಲವೆಂದು ಹೇಳಲಾಗಿದ. ॥೧೦೮॥

ಸಿದ್ಧಾಂತವನ್ನು ಓದುವ ಕಾಲ

ಭಾನೋರುದಯತೋ ನಾಡೀಷಟ್ಕಂ ಸ್ವಾಧ್ಯಾಯಗೋಚರಮ್ ।

ತತೋ ಮುನಿಃ ಪ್ರವರ್ತೇತ ಯೋಗ್ಯಕೃತ್ಯೇಷು ನಿತ್ಯಶಃ॥೧೦೯॥

ಅರ್ಥ :– ಸೂರ್ಯನ ಉದಯದಿಂದ ಆರು ಗಳಿಗೆಗಳು ಅಂದರೆ ಮೂರು ಮುಹೂರ್ತಗಳು ಕಳೆದ ತರುವಾಯ ಸ್ವಾಧ್ಯಾಯವಿಷಯದ ಕಾಲವವು ಹೇಳಲಾಗಿದೆ. ಆದುದರಿಂದ ಮುನಿಯು ದಿನಾಲು ಸೂರ್ಯೋದಯದಿಂದ ಆರುಗಳಿಗೆ ಕಾಲ ಕಳೆದ ಮೇಲೆ ಮಾಡಲು ಯೋಗ್ಯ ಕೃತ್ಯಗಳಲ್ಲಿ ಪ್ರವೃತ್ತಿ ಮಾಡತಕ್ಕದ್ದು. ॥೧೦೯॥

೧ ತದಾನಾಹಸ್ತದೀಡ್ಮತೇ ।

ಮನಾಗುದ್ದೇಶಿತೋ ಮಾರ್ಗ್ಗೋ ನಿತ್ಯನೈಮಿತ್ತಿಕಾತ್ಮಸು ।
ಕ್ರಿಯಾಸು ವಿಸ್ತರೋ ಜ್ಞೇಯಃ ಪೂರ್ವಾಚಾರ್ಯಮತಾತ್ತತಃ
॥೧೧೦॥

ಅರ್ಥ ಃ– ಇಲ್ಲಿ ನಿತ್ಯನೈಮಿತ್ತಿಕ ಸ್ವರೂಪ ಕ್ರಿಯೆಗಳಲ್ಲಿ ಸ್ವಲ್ಪವಾಗಿ ಹೇಳಲ್ಪಟ್ಟಿದೆ. ಆದುದರಿಂದ ಮೋಕ್ಷಮಾರ್ಗದಲ್ಲಿ ಪೂರ್ವಾಚಾರ್ಯರ ಮತದಿಂದ ಈ ನಿತ್ಯ ನೈಮಿತ್ತಿಕ ಕ್ರಿಯೆಗಳ ವಿಸ್ತಾರವು ತಿಳಿಯಲು ಯೋಗ್ಯವಾಗಿದೆ. ॥೧೧೦॥

ಜಿನೇಶ್ವರಮತವನ್ನು ಮನ್ನಿಸುವವರು ಪಡೆಯುವ ಫಲ

ತೀರ್ಥೇಶಾಂ ಸರ್ವಭಾವಾನಾಂ ಮತಂ ಕೇ ನಾನುಮನ್ವತೇ ।
ತನ್ಮನ್ವಾನಾ ನ ಹೀಯಂತೇ ಶಕ್ರವಂದಿತಸಂಪದಃ ॥೧೧೧॥

ಅರ್ಥ ಃ– ತೀರ್ಥಂಕರರ ಸರ್ವದ್ರವ್ಯ ಪರ್ಯಾಯಗಳ ಮತವನ್ನು-ಮಾನ್ಯತೆಯನ್ನು ಯಾರು ತಾನೇ ಸ್ವೀಕರಿಸುವುದಿಲ್ಲ? ಅಂದರೆ ಎಲ್ಲರೂ ಮಾನಿಸುತ್ತಾರೆ ಏಕೆಂದರೆ ತೀರ್ಥಂಕರಮತವನ್ನು ಒಪ್ಪತಕ್ಕವರು ಹೀನರಾಗುವುದಿಲ್ಲ. ಆದರೆ ಇಂದ್ರರಿಂದ ವಂದಿಸಲ್ಪಟ್ಟ ಅನಂತ ಜ್ಞಾನಾದಿ ಸಂಪತ್ತಿವುಳ್ಳವರಾಗುತ್ತಾರೆ. ತೀರ್ಥಂಕರರು ಹೇಳಿದ ವಸ್ತು ಸ್ವಭಾವವನ್ನು ಸ್ವೀಕರಿಸುವವರು ಕಡೆಗೆ ತೀರ್ಥಂಕರರಾಗುತ್ತಾರೆ. ಎಂದು ಭಾವವಿದೆ. ॥೧೧೧॥

ವಿದ್ವಾಂಸರಿಂದ ಮಾಡಲ್ಪಟ್ಟ ಇಂದ್ರನಂದ್ಯಾಚಾರ್ಯಸ್ತುತಿ

ಮಾದ್ಯತ್ಪ್ರತ್ಯರ್ಥಿವಾದಿದ್ವಿರದಪಟುಘಟಾಟೋಪಕೋಪಾಪ
ನೋದೇ
ವಾಣೀ ಯಸ್ಯಾಭಿರಾಮಾ ಮೃಗಪತಿಪದವೀಂ ಗಾಹತೇ
ದೇವಮಾನ್ಯಾ।

ಸಃ ಶ್ರೀಮಾನಿಂದ್ರನಂದೀ ಜಗತಿ ವಿಜಯತಾಂ ಭೂರಿಭಾವಾನುಭಾವೋ

ದೈವಜ್ಞಃ ಕುಂದಕುಂದಪ್ರಭುಪದವಿನಯಃ ಸ್ವಾಗಮಾಚಾರಚಂಚುಃ ॥೧೧೨॥

ಅರ್ಥ :- ಉನ್ಮಾದ ಪಡೆಯುತ್ತಿರುವ, ಪ್ರತಿವಾದಿಗಳೆಂಬ ಪಟುವಾದ ಆನೆಗಳ ಸಮೂಹದ ಕ್ರೋಧಾವೇಶವನ್ನು ದೂರಮಾಡುವುದರಲ್ಲಿ ಯಾವನ ಅಭಿಪ್ರಾಯ- ಮನೋಹರವೂ. ದೇವಮಾನ್ಯವೂ ಆದ ವಾಣಿಯು ಸಿಂಹದ ಪದವಿಯನ್ನು ಹೊಂದುತ್ತದೆಯೋ, ಅಂದರೆ ಪ್ರತಿವಾದಿಗಳನ್ನು ತಮ್ಮ ವಾಣಿಯ ಪ್ರಭಾವದಿಂದ ಸಿಂಹದಂತೆ ಜಯಿಸುತ್ತಾರೆಯೋ ಅಂಥ ಆ ಪ್ರಸಿದ್ಧ ಅತಿಶಯ ಪ್ರಭಾವಶಾಲಿಯೂ, ದೈವಜ್ಞನೂ, ಶ್ರೀ ಕುಂದಕುಂದಸ್ವಾಮಿಯ ಪದಗಳಲ್ಲಿ ವಿನಯಶೀಲನೂ, ಜೈನಾಗಮದಲ್ಲಿ ಹೇಳಿದ ಆಚಾರದಲ್ಲಿ ನಿಪುಣನೂ ಸಮ್ಯಗ್ದರ್ಶನ ಜ್ಞಾನ ಚಾರಿತ್ರ, ಶ್ರೀಯುಕ್ತನಾದ ಇಂದ್ರನಂದಿ ಆಚಾರ್ಯನು ಜಗತ್ತಿನಲ್ಲಿ ವಿಜಯಶಾಲಿಯಾಗಲಿ.

ಇತಿ ಶ್ರೀಮದಿಂದ್ರನಂದ್ಯಾಚಾರ್ಯವಿರಚಿತನೀತಿಸಾರೋಽಯಂ

ಸಮಯಭೂಷಣಾಪರನಾಮಧೇಯೋ ಗ್ರಂಥಸ್ಸಮಾಪ್ತಃ

ಶ್ರೀ ಶ್ರೀ ಶ್ರೀ ಶ್ರೀ ಶ್ರೀ

* * * * * * * * * * * * * * *

— ಸಮಾಪ್ತ —

ಧರ್ಮಾಮೃತ ಪ್ರಕಾರ

ಪ್ರತಿದಿನವೂ ಮಾಡಲ್ಪಡುವ ಭಕ್ತಿಗಳು

ತ್ರಿಸಂಧ್ಯವಂದನೇ ಯುಂಜ್ಯಾಚ್ಚೈತ್ಯಪಂಚಗುರುಸ್ತುತೀ ।
ಪ್ರಿಯಭಕ್ತಿಂ ಬೃಹದ್ಭಕ್ತಿಷ್ವಂತೇ ದೋಷವಿಶುದ್ಧಯೇ ॥೧॥

ಅರ್ಥ :- ಪ್ರಾತಃಕಾಲ ಮಧ್ಯಾಹ್ನಕಾಲ ಮತ್ತು ಸಾಯಂಕಾಲಗಳ ವಂದನೆಯಲ್ಲಿ ಚೈತ್ಯಭಕ್ತಿ ಮತ್ತು ಪಂಚಗುರುಭಕ್ತಿಗಳನ್ನು ಮಾಡತಕ್ಕದು. ದೊಡ್ಡ ಭಕ್ತಿಗಳಲ್ಲಿ ಕೊನೆಗೆ ಪ್ರಮಾದಾದಿ ದೋಷಗಳನ್ನು ದೂರಮಾಡುವುದಕ್ಕೋಸ್ಕರ ಪ್ರಿಯಭಕ್ತಿಯನ್ನು-ಸಮಾಧಿ ಭಕ್ತಿಯನ್ನು ಸೇರಿಸಬೇಕು. ಅಂದರೆ ಸಮಾಧಿ ಭಕ್ತಿಯನ್ನು ಹೇಳಬೇಕು. ॥೧॥

ಚತುರ್ದಶೀಕ್ರಿಯಾಭಕ್ತಿಗಳು

ತ್ರಿಸಮಯವಂದನಭಕ್ತಿದ್ವಯಮಧ್ಯೇ ಶ್ರುತನುತಿಂ ಚತುರ್ದಶ್ಯಾಮ್ ।
ಪ್ರಾಹುಸ್ತದ್ಭಕ್ತಿದ್ವಯಮುಖಾಂತಯೋಃ ಕೇऽಪಿ ಸಿದ್ಧಶಾಂತಿನುತೀ ॥೨॥

ಅರ್ಥ :- ಚತುರ್ದಶಿಯಲ್ಲಿ ಮೂರು ಸಂಧ್ಯಾ ಸಮಯದಲ್ಲಿ ನಿತ್ಯವೂ ಹೇಳಲ್ಪಡುವ ಎರಡು ಭಕ್ತಿಗಳ ಮಧ್ಯದಲ್ಲಿ ಶ್ರುತ ಭಕ್ತಿಯನ್ನು ಜೋಡಿಸಬೇಕು. ಅಂದರೆ ಚೈತ್ಯ ಭಕ್ತಿ, ಶ್ರುತ ಭಕ್ತಿ ಮತ್ತು ಪಂಚ ಗುರು ಭಕ್ತಿಗಳನ್ನು ಪಠಿಸಬೇಕು. ಕೆಲವು ಆಚಾರ್ಯರು ಎರಡೂ ಭಕ್ತಿಗಳ ಪ್ರಾರಂಭದಲ್ಲಿ ಮತ್ತು ಕೊನೆಯಲ್ಲಿ ಸಿದ್ಧಭಕ್ತಿ ಶಾಂತಿಭಕ್ತಿಗಳನ್ನೂ ಪಠಿಸಬೇಕು ಎಂದು ಹೇಳುತ್ತಾರೆ. ಅಂದರೆ ಕ್ರಮವಾಗಿ ಸಿದ್ಧಭಕ್ತಿ, ಚೈತ್ಯಭಕ್ತಿ, ಪಂಚಗುರುಭಕ್ತಿ ಮತ್ತು ಶಾಂತಿಭಕ್ತಿಗಳನ್ನು ಅನ್ನಬೇಕೆಂದು ಹೇಳುತ್ತಾರೆ. ॥೨॥

ಅಷ್ಟಮೀಕ್ರಿಯಾ

ಸ್ಯಾತ್ಸಿದ್ಧಶ್ರುತಚಾರಿತ್ರಶಾಂತಿಭಕ್ತ್ಯಾಷ್ಟಮೀಕ್ರಿಯಾ ।
ಪಕ್ಷಾಂತೇ ಸಾಽಶ್ರುತಾ ವೃತ್ತಂ ಸ್ತುತ್ವಾಽಽಲೋಚ್ಯಂ
ಯಥಾಯಥಮ್ ॥೩॥

ಅರ್ಥ :- ಸಿದ್ಧಭಕ್ತಿ, ಶ್ರುತಭಕ್ತಿ, ಚಾರಿತ್ರಭಕ್ತಿ ಇವುಗಳಿಂದ ಅಷ್ಟಮೀ ಕ್ರಿಯೆಯು ಆಗತಕ್ಕದು. ಅಂದರೆ ಅಷ್ಟಮಿಯಲ್ಲಿ ಈ ಭಕ್ತಿಗಳನ್ನು ಹೇಳಬೇಕು. ಪಕ್ಷಾಂತದಲ್ಲಿ-ಹುಣ್ಣಿವೆ ಅಮಾವಾಸ್ಯೆಗಳಲ್ಲಿ ಶಾಸ್ತ್ರಾನುಸಾರವಾಗಿ ಶ್ರುತ ಭಕ್ತಿ ಇಲ್ಲದೆ ಚಾರಿತ್ರ ಭಕ್ತಿಯನ್ನು ಸ್ತುತಿಸಿ ಆಲೋಚನ ಮಾಡಬೇಕು. ಅಂದರೆ ಪಕ್ಷಾಂತದಲ್ಲಿ ಸಿದ್ಧಿ ಭಕ್ತಿ, ಚಾರಿತ್ರಭಕ್ತಿ, ಶಾಂತಿಭಕ್ತಿಗಳನ್ನು ಹೇಳಿ ಆಲೋಚನ ಮಾಡತಕ್ಕದ್ದು. ॥೩॥

ಧರ್ಮಾಮೃತೋಕ್ತ ಪರ್ವತಿಥಿ ಪ್ರಮಾಣ

ತ್ರಿಮುಹೂರ್ತೇಽಪಿ ಯತ್ರಾರ್ಕ ಉದೇತ್ಯಸ್ತಮಯತ್ಯಥ ।
ಸ ತಿಥಿಸ್ಸಕಲೋ ಜ್ಞೇಯಃ ಪ್ರಾಯೋ ಧರ್ಮ್ಯೇಷು ಕರ್ಮಸು
॥೪॥

ಅರ್ಥ :- ಯಾವ ತಿಥಿಯಲ್ಲಿ ಸೂರ್ಯನು ಮೂರು ಮುಹೂರ್ತದಲ್ಲಾದರೂ ಉದಯವನ್ನು ಹೊಂದುತ್ತಾನೆಯೋ ಮತ್ತು ಅಸ್ತವನ್ನು ಹೊಂದುತ್ತಾನೆಯೋ ಬಹುತರವಾಗಿ ಧರ್ಮ್ಯ ಕ್ರಿಯೆಗಳಲ್ಲಿ ಆ ತಿಥಿಯು ಆ ದಿನ ಪೂರ್ಣವೆಂದು ತಿಳಿಯತಕ್ಕದ್ದು, ಅಂದರೆ ಸೂರ್ಯೋದಯದಿಂದ ಆ ದಿನದಲ್ಲಿ ಅಪೇಕ್ಷಣೀಯವಾದ ಪರ್ವತಿಥಿಯು ಮೂರು ಮುಹೂರ್ತವಿದ್ದುದಾದರೆ ಅದನ್ನು ಗ್ರಹಿಸಬೇಕು. ॥೪॥

ಅಷ್ಟಾಹ್ನಿಕ ಭಕ್ತಿಕ್ರಿಯಾಧ್ಯಯನ

ಕುರ್ವಂತು ಸಿದ್ಧನಂದೀಶ್ವರಗುರುಶಾಂತಿಸ್ತವೈಃ ಕ್ರಿಯಾ ಽಷ್ಟೌ।
ಶುಚ್ಯೂರ್ಜತಪಸಿ (ಸ್ಸ) ಸಿತಾಷ್ಟಮ್ಯಾದಿದಿನಾನಿ ಮಧ್ಯಾಹ್ನೇ ॥೫॥

ಅರ್ಥ :- ಆಷಾಢ ಕಾರ್ತಿಕ ಮತ್ತು ಫಾಲ್ಗುಣ ಮಾಸಗಳಲ್ಲಿ ಶುದ್ಧ ಪಕ್ಷದ ಅಷ್ಟಮಿ ಮೊದಲಾಗಿ ಎಂಟು ದಿನಗಳ ವರೆಗೆ ಮಧ್ಯಾಹ್ನದಲ್ಲಿ ಸಿದ್ಧ ಭಕ್ತಿ, ನಂದೀಶ್ವರಭಕ್ತಿ, ಪಂಚಗುರುಭಕ್ತಿ ಮತ್ತು ಶಾಂತಿಭಕ್ತಿಗಳಿಂದ ಕ್ರಿಯೆಯನ್ನು ಮಾಡಬೇಕು. ಅಂದರೆ ಅಷ್ಟಾಹ್ನಿಕ ಪರ್ವದ ಎಂಟು ದಿನಗಳಲ್ಲಿ ಮೇಲೆ ಹೇಳಿದ ನಾಲ್ಕು ಭಕ್ತಿಗಳನ್ನು ಹೇಳಿ ಅಷ್ಟಾಹ್ನಿಕ ಕ್ರಿಯೆಯನ್ನು ಮಾಡಬೇಕು. ॥೫॥

ಶ್ರುತಪಂಚಮೀಕ್ರಿಯಾ

ಬೃಹತ್ಯಾ ಶ್ರುತಪಂಚಮ್ಯಾಂ ಭಕ್ತ್ಯಾ ಸಿದ್ಧಶ್ರುತಾರ್ಥಯಾ।
ಶ್ರುತಸ್ಕಂಧಂ ಪ್ರತಿಷ್ಠಾಪ್ಯ ಗೃಹೀತ್ವಾ ವಾಚನಾಂ ಬೃಹತ್ ॥೬॥

ಕ್ಷಮ್ಯೋ ಗೃಹೀತ್ವಾ ಸ್ವಾಧ್ಯಾಯಃ(?)ಕೃತ್ವಾ ಶಾಂತಿಸ್ತುತಿಸ್ತತಃ।
ಯತೀನಾಂ ಗೃಹಿಣಾಂ ಸಿದ್ಧಶ್ರುತಶಾಂತಿಸ್ತವಾಃ ಪುನಃ ।೭॥

ಅರ್ಥ :- ಶ್ರುತಪಂಚಮಿಯಲ್ಲಿ ದೊಡ್ಡ ಸಿದ್ಧಭಕ್ತಿ ಮತ್ತು ಶ್ರುತ ಭಕ್ತಿಪೂರ್ವಕವಾಗಿ ಶ್ರುತಸ್ಕಂಧವನ್ನು ಪ್ರತಿಷ್ಠಾಪಿಸಿ ಶ್ರುತಾವತಾರ ವನ್ನು ಉಪದೇಶಿಸಬೇಕು. ಮತ್ತು ಮುನಿಯು ಶ್ರುತಭಕ್ತಿ, ಆಚಾರ್ಯಭಕ್ತಿ ಪೂರ್ವಕವಾಗಿ ವಾಚನಾಸ್ವಾಧ್ಯಾಯವನ್ನು ಗ್ರಹಿಸಬೇಕು. ಮತ್ತೆ ಸ್ವಾಧ್ಯಾಯ ನಿಷ್ಠಾಪನೆಯಲ್ಲಿಯೂ ಸಹ ಮುನಿಗಳು ಮತ್ತು ಗೃಹಸ್ಥರು ಸಿದ್ಧಭಕ್ತಿ, ಶ್ರುತ ಭಕ್ತಿ ಮತ್ತು ಶಾಂತಿಭಕ್ತಿಗಳನ್ನು ಹೇಳಬೇಕು. ॥೬-೭॥

ಸಿದ್ಧಾಂತಾಧ್ಯಯನ ನಿಯಮಃ

ಕಲ್ಪ್ಯಃ ಕ್ರಮೋಽಯಂ ಸಿದ್ಧಾಂತಾಚಾರವಾಚನಯೋರಪಿ ।
ಏಕೈಕಸ್ಯಾಧಿಕಾರಾಂತೇ ವ್ಯುತ್ಸರ್ಗಸ್ತನ್ಮುಖಾಂತಯೋಃ ॥೮॥

ಸಿದ್ಧಶ್ರುತಗಣಸ್ತೋತ್ರಂ ವ್ಯುತ್ಸರ್ಗಶ್ಚಾತಿಭಕ್ತಯೇ ।
ದ್ವಿತೀಯಾದಿ ದಿನೇ ಷಟ್ ಷಟ್ ಪ್ರದೇಯಾ ವಾಚನಾವನೌ॥೯॥

ಅರ್ಥ :- ಸಿದ್ಧಾಂತವಾಚನದಲ್ಲಿಯೂ, ಆಚಾರವಾಚನದಲ್ಲಿಯೂ ಕೂಡ ಈ ಕ್ರಮವು ಅಂದರೆ ಶ್ರುತಪಂಚಮಿಯ ಕ್ರಮವು ಮಾಡಲು ಯೋಗ್ಯವಾಗಿದೆ. ಮತ್ತು ಒಂದೊಂದು ಅಧಿಕಾರದ ಕೊನೆಯಲ್ಲಿ ಕಾಯೋತ್ಸರ್ಗವು ಮಾಡಲಿಕ್ಕೆ ಯೋಗ್ಯವಾಗಿದೆ. ವಾಚನದ ಪ್ರಾರಂಭದಲ್ಲಿಯೂ ಕೊನೆಯಲ್ಲಿಯೂ ಸಿದ್ಧಸ್ತೋತ್ರ, ಶ್ರುತಸ್ತೋತ್ರ, ಮತ್ತು ಗಣಸ್ತೋತ್ರ ಅಂದರೆ ಆಚಾರ್ಯಭಕ್ತಿಗಳನ್ನು ಹೇಳತಕ್ಕದ್ದು. ಅತಿಶಯ ಭಕ್ತಿಗೋಸ್ಕರ ಎರಡನೆ ಮೂರನೆ ಮೊದಲಾದ ದಿನದಲ್ಲಿ ವಾಚನದ ಭೂಮಿಯ ಮೇಲೆ ಆರು ಆರು ವ್ಯುತ್ಸರ್ಗಗಳೂ ಕೊಡಲು ಯೋಗ್ಯವಾಗಿವೆ- ಅಂದರೆ ಆರಾರು ವ್ಯುತ್ಸರ್ಗಗಳನ್ನು ಮಾಡಬೇಕು. ॥೮-೯॥

ಅನಗಾರಧರ್ಮಾಮೃತೋಕ್ತ ನೈಮಿತ್ತಿಕ ಕ್ರಿಯಾ

ಸಾದ್ಯಂತಸಿದ್ಧಶಾಂತಿಸ್ತುತೀ ಜಿನಗರ್ಭಜನುಷೋಃ
ಸ್ತುಯಾದ್ವೃತ್ತಂ ।
ನಿಷ್ಕ್ರಮಣೇ ಯೋಗ್ಯಂತಂ ವಿದಿ ಶ್ರುತಾದ್ಯಪಿ ಶಿವೇ ಶಿವಾಂತಮಪಿ ॥೧೦॥

ಅರ್ಥ :- ತೀರ್ಥಂಕರರ ಗರ್ಭಕಲ್ಯಾಣ ಮತ್ತು ಜನ್ಮಕಲ್ಯಾಣಗಳಲ್ಲಿ ಪ್ರಾರಂಭದಲ್ಲಿ ಮತ್ತು ಕೊನೆಯಲ್ಲಿ ಸಿದ್ಧಭಕ್ತಿ ಶಾಂತಿಭಕ್ತಿ ಮತ್ತು ವೃತ್ತ

ಅಂದರೆ ಚಾರಿತ್ರಸ್ತುತಿಯನ್ನು ಮಾಡಬೇಕು. ದೀಕ್ಷಾಕಲ್ಯಾಣದಲ್ಲಿ ಸಿದ್ಧಭಕ್ತಿ, ಶಾಂತಿಭಕ್ತಿ, ಚಾರಿತ್ರಭಕ್ತಿ, ಯೋಗಿಭಕ್ತಿಗಳನ್ನು ಹೇಳಬೇಕು. ವಿಧಿ ಅಂದರೆ ಕೇವಲಜ್ಞಾನಕಲ್ಯಾಣದಲ್ಲಿ ಶ್ರುತಭಕ್ತಿ, ಸಿದ್ಧಭಕ್ತಿ, ಶಾಂತಿಭಕ್ತಿ, ಚಾರಿತ್ರಭಕ್ತಿಗಳನ್ನು ಪಠಿಸಬೇಕು. ಮೋಕ್ಷಕಲ್ಯಾಣದಲ್ಲಿ ಸಿದ್ಧಭಕ್ತಿ, ಶಾಂತಿಭಕ್ತಿ, ಚಾರಿತ್ರಭಕ್ತಿ ಮತ್ತು ಕಡೆಗೆ ನಿರ್ವಾಣಭಕ್ತಿ ಇವುಗಳನ್ನು ಹೇಳಬೇಕು.

ಮೇಲೆ ಈ ಪ್ರಕಾರವಾಗಿ ಹೇಳಿರುವುದರಿಂದ ಯುಗಾವಧಿಯಾದ ಫಾಲ್ಗುಣ ಬಹುಳ ಅಮಾವಾಸಿ ದಿವಸದಲ್ಲಿ ಸಿದ್ಧಭಕ್ತಿ, ಚಾರಿತ್ರಭಕ್ತಿ, ನಿರ್ವಾಣಭಕ್ತಿ, ಶಾಂತಿಭಕ್ತಿಗಳನ್ನು ಹೇಳಬೇಕು. ಏತಕ್ಕೆಂದರೆ ಫಾಲ್ಗುಣ ಬಹುಳ ಅಮಾವಾಸಿಯು ಅರತೀರ್ಥಂಕರರಿಗೂ ಅನಂತ ತೀರ್ಥಂಕರರಿಗೂ ಮೋಕ್ಷ ಕಲ್ಯಾಣ ದಿನವಾಗಿದೆ. ಪುರಾಣಗಳಲ್ಲಿ ಚೈತ್ರ ಬಹುಳ ಅಮಾವಾಸಿ ಎಂದು ಹೇಳಿದೆ, ಅಂದರೆ ಆಗಮ ಪರಂಪರೆಯಲ್ಲಿ ಪೂರ್ಣಿಮಾಸಿ ದಿನವೇ ಆ ತಿಂಗಳು ಪೂರ್ತಿಯಾಗುತ್ತದೆಂಬ ನಿಯಮವಿರುವುದರಿಂದ ನಮ್ಮ ದೇಶದ ವಾಡಿಕೆಯಲ್ಲಿರುವ ಫಾಲ್ಗುಣ ಬಹುಳ ಅಮಾವಾಸಿಗೆ ಆಗಮದಲ್ಲಿ ಚೈತ್ರ ಬಹುಳ ಅಮಾವಾಸಿ ಎಂದು ಆಗುತ್ತದೆ. ಚೈತ್ರಶುದ್ಧ ಪಾಡ್ಯತಿಥಿಯೂ ಮಲ್ಲಿತೀರ್ಥಂಕರರ ಗರ್ಭಾವತರಣ ಕಲ್ಯಾಣದ ದಿನವಾದುದರಿಂದ ಯುಗಾದಿ ಹಬ್ಬದ ದಿನದಲ್ಲಿ ಸಿದ್ಧಭಕ್ತಿ, ಚಾರಿತ್ರಭಕ್ತಿ, ಶಾಂತಿಭಕ್ತಿಗಳನ್ನು ಹೇಳತಕ್ಕದ್ದು. ಮತ್ತು ಫಾಲ್ಗುಣ ಬಹುಳ ಅಮಾವಾಸಿ ದಿನದಲ್ಲಿ ಅನಂತತೀರ್ಥಂಕರರಿಗೆ ಕೇವಲಜ್ಞಾನವಾದುದರಿಂದ ಶ್ರುತ–ಸಿದ್ಧ–ಚಾರಿತ್ರ, ಶಾಂತಿಭಕ್ತಿಗಳನ್ನು ಸಹ ಮಾಡಬೇಕು. ಇದೇ ಮೇರೆಗೆ ಇಪ್ಪತ್ತುನಾಲ್ಕು ತೀರ್ಥಂಕರರ ಪಂಚಕಲ್ಯಾಣ ದಿನಗಳನ್ನು ನೋಡಿಕೊಂಡು ಅದಕ್ಕೆ ಸರಿಯಾದ ಅಧ್ಯಯನ ಮಾಡಬೇಕು. ಭಕ್ತಿಗಳನ್ನು ಪಠಿಸಬೇಕು.

ಶುದ್ಧಿ ಪತ್ರಿಕೆ

ಪುಟ	ಸಾಲು	ಅಶುದ್ಧ	ಶುದ್ಧ
೧೦	೨೦	ಸ್ವಿಕಾರವು	ಸ್ವೀಕಾರವು
೧೨	೨೦	ಬಾವವು	ಭಾವವು
೨೨	೧	ಅತಿಕವಿಸು	ಅತಿಕ್ರಮಿಸು
೨೪	೧೨	ಸದ್ದಾ	ಸದಾ
೨೫	೩	ಲ್ಪ್ಯಂ	ಕಲ್ಪ್ಯಂ
೨೬	೭	ಸಾವಧಾನಾ ದ	ಸಾವಧಾನನಾದ
೨೭	೧೪	ಜಿನಚದ್ರೋ	ಜಿನಚಂದ್ರೋ
೨೮	೩	ವಿದಾಂವಂ;	ವಿದಾಂವರಃ
೨೮	೬	ರಚಿಶಂ	ರಚಿತಂ
೨೯	೬	ಸ್ಫುಟ	ಸ್ಫುಟಮ್
೨೯	೨	ಬಿಹಿರಂಗ	ಬಹಿರಂಗ
೨೯	೭	ಅನ್ಯಸಘ	ಅನ್ಯಸಂಘ
೩೦	೪	ದಿಗಂಬನತ್ವ	ದಿಗಂಬರತ್ವ
೩೦	೧೭	ಮೇದ್ರೆ	ಮುದ್ರೆ
೩೧	೫	ಪತಿಮೆ	ಪ್ರತಿಮೆ
೩೨	೧೫	ಕಾಂಯೇದ್	ಕಾಂಯೇದ್
೩೪	೫	ಗಚ್ಛಾದ	ಗಚ್ಛಾದ್
೩೫	೧೩	ಹ	ಸಹ
೩೭	೧೮	ವಿಸಘಭಕ್ತಾ	ವಿಸಂಘಭಕ್ತಾ

परस्परोपग्रहो जीवानाम्

ಸೂಚನೆ :— ಈ ಪುಸ್ತಕವು ಜಿನಮಂದಿರ, ಸ್ವಾಧ್ಯಾಯಮಂಡಳ, ತ್ಯಾಗಿ ಜನರು ಸರಸ್ವತಿಮಂದಿರ ಇತ್ಯಾದಿಗಳಿಗೆ ಪೋಸ್ಟೇಜು ಕಳಿಸಿದಲ್ಲಿ ಸಾದರ ಭೇಟ ದೊರಕುಗುವುದು.